# ಅಪೊಸ್ತಲನಾದ ಪೇತ್ರನ ಮೊದಲನೆಯ ಪತ್ರಿಕೆ

**ಗ್ರಂಥಕರ್ತ:**

ಕರ್ತನಾದ ಯೇಸು ಕ್ರಿಸ್ತನ ಮೂಲ ಅಪೊಸ್ತಲನಾದ ಪೇತ್ರನು.

**ದಿನಾಂಕ:**

ಕ್ರಿ.ಶ 65 ಮತ್ತು 67 ರ ನಡುವೆ.

**ಧ್ಯೇಯ:**

ಪೇತ್ರನು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡ ಯೆಹೂದ್ಯ ವಿಶ್ವಾಸಿಗಳಿಗೆ ಬರೆದಿದ್ದಾನೆ (1:1) ಯಾಕಂದರೆ ಅವನು ಯೆಹೂದ್ಯರಿಗೆ ಅಪೊಸ್ತಲನಾಗಿದ್ದನು (ಗಲಾ 2:8-9). ಆದರೂ, ಅವನು ಬರೆದಿರುವ ಭಾಗ್ಯದಾಯಕವಾದ ಸತ್ಯವು ದೇವರಾತ್ಮನ ಪ್ರೇರಣೆಯಿಂದ ಬಂದದ್ದಾಗಿದೆ ಹಾಗೂ ಎಲ್ಲಾ ಕಾಲಗಳ ವಿಶ್ವಾಸಿಗಳಿಗೆ ಅನ್ವಯವಾಗುತ್ತದೆ. ಕರ್ತನಾದ ಯೇಸು ಕ್ರಿಸ್ತನು ಪೇತ್ರನಿಗೆ ಲೂಕ 22:31-32 ರಲ್ಲಿ ಕೊಟ್ಟಿರುವ ಆಜ್ಞೆಯನ್ನು ಅವನು ಈ ಪತ್ರಿಕೆಯಲ್ಲಿ ಒಂದು ಭಾಗದಷ್ಟು ನೆರವೇರಿಸಿದ್ದಾನೆ. ಪೇತ್ರನು ಇಲ್ಲಿ ಬರೆದಿರುವ ವಿಷಯಗಳಿಂದ ಯೇಸು ಕ್ರಿಸ್ತನಲ್ಲಿರುವ ಅಸಂಖ್ಯ ವಿಶ್ವಾಸಿಗಳು ತಮ್ಮ ನಂಬಿಕೆಯಲ್ಲಿ ಬಲಗೊಂಡಿದ್ದಾರೆ. ಪ್ರಾಮುಖ್ಯವಾದ ಕೆಲವು ಪದಗಳು ಯಾವುವೆಂದರೆ "ನಿರೀಕ್ಷೆ", "ಶ್ರಮೆ", "ಕೃಪೆ", ಮತ್ತು "ಪ್ರಭಾವ". ಮೂಲಭೂತ ಧ್ಯೇಯ ಏನೆಂದರೆ ವಿಶ್ವಾಸಿಗಳು ಶ್ರಮೆಗಳನ್ನು ಅನುಭವಿಸುವದು ಮತ್ತು ನಂತರ ದೊರೆಯುವ ಪ್ರಭಾವ.

# 1

**1:1** "*ಅಪೊಸ್ತಲನು*"– ಮತ್ತಾಯ 10:2.

"*ಪ್ರವಾಸಿಗಳು*"– 2:11; ಇಬ್ರಿ 11:9,13. ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಈ ಲೋಕದಲ್ಲಿದ್ದರೂ ಈ ಲೋಕದವರಲ್ಲ. ಅವರ ಪೌರತ್ವವು ಪರಲೋಕದಲ್ಲಿದೆ – ಫಿಲಿಪ್ಪಿ 3:20.

"*ಚದುರಿರುವ*"– ಪೇತ್ರನು ಗ್ರೀಕ್ ಭಾಷೆಯ (ಡಯಾಸ್ಪೋರ) ಎಂಬ ತಾಂತ್ರಿಕ ಪದವನ್ನು ಬಳಸಿದ್ದಾನೆ, ಇದರ ಅರ್ಥ ಪಾಲೆಸ್ತೀನಿನ ಹೊರಗೆ ಜೀವಿಸುತ್ತಿರುವ ಯೆಹೂದ್ಯರು (ಯೋಹಾನ 7:35). ಪೇತ್ರನು ಈ ಪತ್ರಿಕೆಯನ್ನು ಯಾರಿಗೆ ಬರೆಯುತ್ತಿದ್ದಾನೋ ಅವರು ಯೇಸು ಕ್ರಿಸ್ತನ ಹಿಂಬಾಲಕರಾಗಿದ್ದರು. ಪೇತ್ರನು ಯೆಹೂದ್ಯರಿಗೆ ಅಪೊಸ್ತಲನಾಗಿದ್ದನು (ಗಲಾ 2:7-8), ಅವನು ತನ್ನ ಎರಡೂ ಪತ್ರಿಕೆಗಳಲ್ಲಿ ಯೆಹೂದ್ಯ ಕ್ರೈಸ್ತರಿಗೆ ಸೂಚನೆಗಳನ್ನು

ತಿಳಿಸಿದ್ದಾನೆ. ಅವರಲ್ಲಿ ಅನೇಕರು ಪಂಚಾಶತ್ತಮ ದಿನದಂದು ಪೇತ್ರನ ಮೂಲಕವೇ ಸುವಾರ್ತೆಯನ್ನು ಕೇಳಿಸಿಕೊಂಡಿದ್ದರು ಎಂಬದಾಗಿ ಅನ್ನಿಸುತ್ತದೆ (ಅಪೊ 2:9).

"*ಪೊಂತ . . . ಬಿಥೂನ್ಯ*"– ಇವೆಲ್ಲವೂ ಈ ಟರ್ಕಿ ಎಂಬದಾಗಿ ಕರೆಯಲ್ಪಡುವ ಪ್ರದೇಶದ ಪ್ರಾಂತ್ಯಗಳಾಗಿದ್ದವು. **2**

**1:2** "*ಆರಿಸಿಕೊಳ್ಳಲ್ಪಟ್ಟವರು*"– ಮತ್ತಾಯ 24:22,24,31; ಯೋಹಾನ 17:6; ಎಫೆ 1:4.

"*ಭವಿಷ್ಯದ್ ಜ್ಞಾನ*"– ರೋಮಾ 8:29 ಮತ್ತು ರೋಮಾ ಪತ್ರಿಕೆಯ ಕೊನೆ ಭಾಗದ ನೋಟ್ಸ್ ನೋಡಿರಿ. ಈ ವಾಕ್ಯದಲ್ಲಿ ತ್ರಯೇಕತ್ವದಲ್ಲಿರುವ ಮೂವರು ವ್ಯಕ್ತಿಗಳನ್ನು ಗಮನಿಸಿರಿ (ಮತ್ತಾಯ 3:16-17 ರ ನೋಟ್ಸ್ ನೋಡಿರಿ). ಇಲ್ಲಿ ವಿಶ್ವಾಸಿಗಳ ರಕ್ಷಣೆಯ ಬಗ್ಗೆ ಹಲವು ಸಂಗತಿಗಳನ್ನು ತಿಳಿಸಲಾಗಿದೆ. ಅದರ ಕಾರಣ ಮತ್ತು ಮೂಲವನ್ನು ನಾವು ನೋಡುತ್ತೇವೆ – ದೇವರ ಆಯ್ಕೆ. ಅದರ ವಿಧಾನ ಮತ್ತು ರೀತಿಯನ್ನು ನಾವು ನೋಡುತ್ತೇವೆ – ಆತ್ಮನ ಕಾರ್ಯ. ಅದರ ಉದ್ದೇಶ ಮತ್ತು ಗುರಿಯನ್ನು ನಾವು ನೋಡುತ್ತೇವೆ – ಯೇಸು ಕ್ರಿಸ್ತನಿಗೆ ವಿಧೇಯತೆ. ಮತ್ತು ಅದರ ಸಾಧನ ಮತ್ತು ಆಧಾರವನ್ನು ನಾವು ನೋಡುತ್ತೇವೆ – ಯೇಸು ಕ್ರಿಸ್ತನ ರಕ್ತ. 2 ಥೆಸ 2:13-14 ರೊಂದಿಗೆ ಹೋಲಿಸಿ ನೋಡಿರಿ.

"*ಪ್ರತಿಷ್ಠೆ*"– ಯೋಹಾನ 17:17-19 ರ ನೋಟ್ಸ್ ನೋಡಿರಿ. ಹಾಗೆಯೇ ಯಾಜಕ 20:7 ನೋಡಿರಿ. ದೇವರಾತ್ಮನು ವಿಶ್ವಾಸಿಗಳನ್ನು ಲೋಕದಲ್ಲಿರುವವರಿಂದ ಬೇರ್ಪಡಿಸುತ್ತಾನೆ, ಅವರಲ್ಲಿ ಪಾಪದ ಅರುಹನ್ನು ಹುಟ್ಟಿಸುತ್ತಾನೆ, ಅವನ್ನು ಪಶ್ಚಾತ್ತಾಪಕ್ಕೆ ನಡೆಸುತ್ತಾನೆ ಮತ್ತು ಅವರಿಗೆ ಹೊಸ ಆತ್ಮೀಕ ಜೀವನವನ್ನು ಕೊಡುತ್ತಾನೆ ಹಾಗೂ ಸತ್ಯವನ್ನು ಬೋಧಿಸುತ್ತಾನೆ (ಯೋಹಾನ 3:5-8; 16:7-15).

"*ವಿಧೇಯತೆ*"– ದೇವರ ಕರೆ ಮತ್ತು ಆತ್ಮನ ಕಾರ್ಯದ ಉದ್ದೇಶ ನಮ್ಮನ್ನು ಯೇಸು ಕ್ರಿಸ್ತನಿಗೆ ವಿಧೇಯರನ್ನಾಗಿ ಮಾಡುವದು. ಅಪೊ 22:10 ರ ನೋಟ್ ನೋಡಿರಿ. ಯೇಸು ಕ್ರಿಸ್ತನ ರಕ್ತದ ಪ್ರೋಕ್ಷಣೆಗೆ ಮೊದಲು ಇದನ್ನು ತಿಳಿಸಲಾಗಿರುವದನ್ನು ಗಮನಿಸಿರಿ. ನಾವು ಆತನನ್ನು ಕರ್ತನು ಹಾಗೂ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುತ್ತೇವೆ ಆದ್ದರಿಂದ ಆತನ ರಕ್ತದ ಮೂಲಕ ಶುದ್ಧರಾಗಿ ಪ್ರತಿಷ್ಠೆ ಹೊಂದುತ್ತೇವೆ. ಇದಾದ ನಂತರ, ನಮ್ಮ ಜೀವನ ಪರ್ಯಂತರ, ದೇವರು ನಮ್ಮಲ್ಲಿ ಪ್ರೀತಿಯ ವಿಧೇಯತೆಯನ್ನು ನೋಡಲು ಬಯಸುತ್ತಾನೆ (ಯೋಹಾನ 14:15,23; ರೋಮಾ 1:5).

"*ಪ್ರೋಕ್ಷಣ*"– ಹಳೆಯ ಒಡಂಬಡಿಕೆಯಲ್ಲಿ ನಾಲ್ಕು ಪ್ರಾಮುಖ್ಯವಾದ ಸಂಗತಿಗಳನ್ನು ವ್ಯಕ್ತಪಡಿಸಲು ಪ್ರಾಣಿಗಳ ರಕ್ತವನ್ನು ಚಿಮುಕಿಸಲಾಗುತ್ತಾ ಇತ್ತು. ಅವು ಯಾವುವೆಂದರೆ: ಶುದ್ಧೀಕರಣ (ಯಾಜಕ 14:1-7) ಯಾಜಕರ ಪ್ರತಿಷ್ಠೆ (ವಿಮೋ 29:20-22) ದೇವರ ಒಡಂಬಡಿಕೆಯ ದೃಢೀಕರಣ (ವಿಮೋ 24:1-8) ಪ್ರಾಯಶ್ಚಿತ್ತ (ಯಾಜಕ 16:14) ಯೇಸು

ಕ್ರಿಸ್ತನ ರಕ್ತದ ಮೂಲಕ ವಿಶ್ವಾಸಿಗಳ ಪಾಪಗಳು ಕ್ಷಮಿಸಲ್ಪಟ್ಟಿವೆ ಮತ್ತು ಅವರು ಶುದ್ಧರಾಗಿದ್ದಾರೆ (ಎಫೆ 1:7; ಇಬ್ರಿ 9:14; 1 ಯೋಹಾನ 1:7), ಯಾಜಕರಾಗಿ ದೇವರ ಪ್ರಸನ್ನತೆಗೆ ಹೋಗುವ ಪೂರ್ಣ ಸ್ವಾತಂತ್ರ್ಯವನ್ನು ಅವರಿಗೆ ಕೊಡಲಾಗಿದೆ (ಇಬ್ರಿ 10:19-22), ಇದಲ್ಲದೆ ಅವರನ್ನು ಹೊಸ ಒಡಂಬಡಿಕೆಗೆ ಪಾಲುದಾರರನ್ನಾಗಿ ಮಾಡಲಾಗಿದೆ (ಮತ್ತಾಯ 26:28; ಇಬ್ರಿ 12:24). **3**

**1:3** *"ತಂದೆಯೂ ದೇವರೂ"*– ಎಫೆ 1:3.

*"ಕರುಣೆ"*– ತೀತ 3:5; ಎಫೆ 2:4.

*"ತಿರುಗಿ ಜೀವಿಸುವದು"*– ಯೋಹಾನ 1:13; 3:3-8; ಎಫೆ 2:5; ಯಾಕೋಬ 1:18; 1 ಯೋಹಾನ 3:9; 4:7; 5:1.

*"ಜೀವಕರವಾದ ನಿರೀಕ್ಷೆ"*– ರೋಮಾ 5:2; 8:24-25; ತೀತ 1:2. ಇಲ್ಲಿ "ನಿರೀಕ್ಷೆ" ಎಂದರೆ ಎದುರುನೋಡುವದು.

*"ಪುನರುತ್ಥಾನ"*– ಮತ್ತಾಯ 28:6; ಅಪೊ 1:3; 2:24; ರೋಮಾ 1:4; 1 ಕೊರಿಂಥ 15:12-19. ಒಂದುವೇಳೆ ಯೇಸು ಕ್ರಿಸ್ತನು ಪುನರುತ್ಥಾನಗೊಳ್ಳದೆ ಹೋಗಿದ್ದರೆ ಯಾರಿಗೂ ರಕ್ಷಣೆಯ ನಿರೀಕ್ಷೆಯೇ ಇರುತ್ತಾ ಇರಲಿಲ್ಲ. **4**

**1:4** *"ಬಾಧ್ಯತೆ"*– ಮತ್ತಾಯ 25:34; ಅಪೊ 20:32; ಎಫೆ 1:14; ಕೊಲೊ 1:12; ಇಬ್ರಿ 1:14; 6:12; ಯಾಕೋಬ 2:5. ದೇವರ ಮಕ್ಕಳು ಮಾತ್ರವೇ ಆತ್ಮೀಕವಾಗಿ ತಿರುಗಿ ಜೀವಿಸುವ ಮೂಲಕ ಬಾಧ್ಯತೆಯನ್ನು ಹೊಂದುತ್ತಾರೆ. ಯೇಸು ಕ್ರಿಸ್ತನ ನಿಮಿತ್ತ ಈ ಲೋಕವನ್ನು ತಿರಸ್ಕರಿಸುವವರು ಮೇಲಿನ ಲೋಕದ ಬಾಧ್ಯತೆಯನ್ನು ಹೊಂದುತ್ತಾರೆ (ಮತ್ತಾಯ 19:27-29). ಮೊಟ್ಟಮೊದಲನೆಯದಾಗಿ, ಭಾಧ್ಯತೆ ಎಂದರೆ, ದೇವರೇ ಆಗಿದ್ದಾನೆ (ಆದಿ 15:1; ಕೀರ್ತನೆ 16:5; 73:25-26; ಪ್ರಲಾ 3:24); ನಂತರ ನಮಗೆ ಕೊಡಲು ಆತನು ಆರಿಸಿಕೊಳ್ಳುವ ಎಲ್ಲಾ ಕಾರ್ಯಗಳಾಗಿವೆ (ಪ್ರಕ 21:7).

*"ಕಳೆಗುಂದದ"*– ಬಾಧ್ಯತೆಯು ಈ ಸೃಷ್ಟಿಯದಲ್ಲ, ಲಯವಾಗುವದೂ ಅಲ್ಲ (1 ಕೊರಿಂಥ 15:50,53) ಬದಲಾಗಿ ನಾಶವಾಗದೆ ಇರುವಂಥದ್ದು ಮತ್ತು ಶಾಶ್ವತವಾದದ್ದು ಆಗಿದೆ.

*"ನಿಮಗಾಗಿ ಇಟ್ಟಿದೆ"*– ಅದನ್ನು ಯಾರಾದರೂ ಹಾಳುಮಾಡುತ್ತಾರೆ ಮತ್ತು ಕದ್ದುಕೊಳ್ಳುತ್ತಾರೆ ಎಂಬ ಅಪಾಯ ಇಲ್ಲ. ದೇವರು ಈ ಬಾಧ್ಯತೆಯನ್ನು ವಿಶ್ವಾಸಿಗಳಿಗಾಗಿ "ಕಾಯ್ದಿರಿಸಿದ್ದಾನೆ" ಮತ್ತು ಅದನ್ನು ಯಾರೂ ಆತನ ಪಾಲನೆಯಿಂದ ತೆಗೆದುಕೊಳ್ಳಲು ಆಗುವದಿಲ್ಲ. ನಂಬುವವರಿಗೆ ಪರಲೋಕದಲ್ಲಿ ಬಾಧ್ಯತೆ ಇರುವದರಿಂದ ಭೂಲೋಕದಲ್ಲಿ ಸಿಗುವ ಎಲ್ಲವುಗಳ ಮೇಲೆ ಕೈ ಹಾಕಲು ಅವರು ಪ್ರಯತ್ನಿಸಬಾರದು. **5**

**1:5** *"ನಂಬಿಕೆಯಿಂದ ಕಾಯುತ್ತಾನೆ"*– ಕಾಯುತ್ತಾನೆ ಎಂದು ಭಾಷಾಂತರ ಮಾಡಲಾಗಿರುವ

ಗ್ರೀಕ್ ಪದವು ಮಿಲಿಟರಿ ಪದವಾಗಿದ್ದು, ಅದರ ಅರ್ಥ "ಜನರನ್ನು ನೇಮಿಸಿ ಕಾಯುವದು" . ಆತನು ಸೇನಾಧೀಶ್ವರನಾದ ಕರ್ತನಾಗಿದ್ದು ಪರಲೋಕದ ಸೈನ್ಯವೆಲ್ಲವೂ ಆತನ ಆದೇಶಕ್ಕಾಗಿ ಕಾಯುತ್ತಿವೆ, ಇದಲ್ಲದೆ ಆತನು ವಿಶ್ವಾಸಿಗಳನ್ನು ಸಂತೈಸಲು ತನ್ನ ಶಕ್ತಿಯುತವಾದ ದೂತರನ್ನು ಕಳುಹಿಸುತ್ತಾನೆ (ಇಬ್ರಿ 1:14; ಕೀರ್ತನೆ 91:11-12). ಅತನು ಈ ಲೋಕದಲ್ಲಿ ಮತ್ತು ಅದೃಶ್ಯವಾಗಿರುವ ಆತ್ಮೀಕ ಲೋಕದಲ್ಲಿ ಕಾರ್ಯಗಳನ್ನು ಏರ್ಪಡಿಸುತ್ತಾನೆ ಆದ್ದರಿಂದ ಆತನ ವಿಶ್ವಾಸಿಗಳು ಸಂರಕ್ಷಣೆಯುಳ್ಳವರಾಗಿ ಕಡೆಯ ತನಕ ಕಾಪಾಡಲ್ಪಡುತ್ತಾರೆ (ಯೋಹಾನ 6:39; 10:28-29). ಇವು ಆತನ ಕುಮಾರನಾದ ಯೇಸು ಕ್ರಿಸ್ತನ ಪ್ರಾರ್ಥನೆಗೆ ದೊರೆತಿರುವ ಉತ್ತರಗಳಾಗಿವೆ (ಯೋಹಾನ 17:11-12; ರೋಮಾ 5:9-10; ಇಬ್ರಿ 7:25). ಆದರೆ ವಿಶ್ವಾಸಿಗಳು ನಂಬುವದನ್ನು ನಿಲ್ಲಿಸಿದರೆ ಏನಾಗುವದು – ಅವರು ತಮ್ಮ ರಕ್ಷಣೆಯನ್ನು ಕಳೆದುಕೊಳ್ಳುವದಿಲ್ಲವೇ? ದೇವರು "ನಂಬಿಕೆಯ ಮೂಲಕ" ಅವರಿಗೆ ಗುರಾಣಿಯಾಗಿರುವನು. ನಂಬಿಕೆಯು ದೇವರ ವರವಾಗಿದೆ (ಎಫೆ 2:8; ಫಿಲಿಪ್ಪಿ 1:29). ಅದು ಆತನ ಕರದಲ್ಲಿರುವ ಸಾಧನವಾಗಿದ್ದು ನಮ್ಮನ್ನು ಆತನೊಂದಿಗೆ ಸಜೀವವಾದ ಸಂಪರ್ಕದಲ್ಲಿ ಇರಿಸುತ್ತದೆ. ಅದು ದೇವರು ನಮ್ಮ ಜೀವಿತದೊಳಗೆ ಬರಮಾಡಿರುವ ಶಕ್ತಿಯುಳ್ಳ ಸಾಧನವಾಗಿದೆ. ಅದು ಪರಿಪೂರ್ಣವಾದ ವರವಾಗಿದೆ ಮತ್ತು ದೇವರು ನಮ್ಮಲ್ಲಿ ಯೋಜನೆ ಮಾಡಿರುವ ಕಾರ್ಯಕ್ಕೆ ಪರಿಪೂರ್ಣವಾಗಿ ಹೊಂದಿಕೆಯಾಗುತ್ತದೆ. ವಿಶ್ವಾಸಿಗಳಿಗೆ ನಂಬಿಕೆಯನ್ನು ಕೊಡುವಾತನು ಅವರ ಹೃದಯಗಳಲ್ಲಿ ನಂಬಿಕೆಯನ್ನು ಜೀವಂತವಾಗಿರಿಸಲು ಶಕ್ತನಾಗಿದ್ದಾನೆ (ಲೂಕ 22:31-32). ನಾವು ಏನು ನಂಬುತ್ತೇವೆ, ನಂಬುವದಿಲ್ಲ ಎಂಬದರ ಆಧಾರದ ಮೇರೆಗೆ ಕಾಯುವದಿಲ್ಲ – ನಂಬಿಕೆಯುಳ್ಳವರಾಗಿ ಆತನು ನಮ್ಮನ್ನು ಕಾಯುತ್ತಾನೆ (ಫಿಲಿಪ್ಪಿ 1:6; ಇಬ್ರಿ 12:2), ಹಾಗೆಯೇ ನಿಸ್ಸಂದೇಹವಾಗಿ, ನಮ್ಮ ನಂಬಿಕೆ ಎಡವುವಾಗಲೂ ಆತನು ನಮ್ಮನ್ನು ಕಾಯುತ್ತಾನೆ ನಂತರ ನಮ್ಮ ನಂಬಿಕೆಯನ್ನು ಉಜ್ಜೀವಗೊಳಿಸುತ್ತಾನೆ.

*"ಅಂತ್ಯಕಾಲದಲ್ಲಿ . . . ರಕ್ಷಣೆಯು"*– ವಿಶ್ವಾಸಿಗಳು ಪಾಪ ಮಾಡದೆ ಇರುವ ಅಥವಾ ಅವರ ಮನಸ್ಸಿನೊಳಗೆ ಸಂದೇಹವು ಪ್ರವೇಶಿಸದೆ ಇರುವ ತನಕ ಮಾತ್ರ ದೇವರು ಅವರು ಕಾಯುವದಿಲ್ಲ. ಅವರ ರಕ್ಷಣೆಯು ಪರಿಪೂರ್ಣವಾಗುವ ತನಕ ದೇವರು ಅವರನ್ನು ಕಾಯುತ್ತಾನೆ. ಇಲ್ಲಿ ಪೇತ್ರನು ರಕ್ಷಣೆಯ ಭವಿಷಯದ ವಿಷಯದ ಬಗ್ಗೆ ಮಾತನಾಡುತ್ತಾ ಇದ್ದಾನೆ. ವಿಶ್ವಾಸಿಗಳು ಈಗಾಗಲೇ ರಕ್ಷಣೆ ಹೊಂದಿದ್ದಾರೆ (ಯೋಹಾನ 5:24; ರೋಮಾ 8:24; ಎಫೆ 2:5; 2 ತಿಮೊ 1:9; ತೀತ 3:5). ಅವರು ರಕ್ಷಣೆ ಹೊಂದುತ್ತಾ ಇದ್ದಾರೆ (1 ಕೊರಿಂಥ 1:18; 2 ಕೊರಿಂಥ 2:15). ಅವರು ರಕ್ಷಣೆ ಹೊಂದುವವರು (ರೋಮಾ 13:11; ಫಿಲಿಪ್ಪಿ 1:28; ಇಬ್ರಿ 1:14; 9:28). **6**

**1:6** *"ಹರ್ಷಿಸಿರಿ"*– ಯೇಸು ಕ್ರಿಸ್ತನಲ್ಲಿ ಆತ್ಮೀಕವಾಗಿ ಹರ್ಷಿಸುವದು ನಿಜವಾದ ಕ್ರೈಸ್ತನ ಗುರುತುಗಳಲ್ಲಿ ಒಂದಾಗಿದೆ. ಇದೂ ಸಹ ದೇವರು ತನಗೆ ಸ್ವಂತವಾದವರಿಗೆ ಕೊಡುವ

ವರವಾಗಿದೆ. ಈ ಹರ್ಷವು ಎಲ್ಲಾ ಕಾರ್ಯಗಳು ಚೆನ್ನಾಗಿರುವಾಗ ನಮ್ಮ ಸ್ವಂತ ಸ್ವಭಾವಗಳಿಂದ ಕಾಣಿಸಿಕೊಳ್ಳುವ ತಾತ್ಕಾಲಿಕವಾದ ಸಂತೋಷವಲ್ಲ. ಇದು ಅಸಾಧಾರಣವಾದ ಹರ್ಷವಾಗಿದೆ. ಒಂದುವೇಳೆ ನಾವು ಇದನ್ನು ಅನುಭವಿಸಿಲ್ಲವೆಂದರೆ, ನಾವು ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಟ್ಟಿಲ್ಲ ಎಂಬದಕ್ಕೆ ಇದು ಬಲವಾದ ಪುರಾವೆಯಾಗಿದೆ (ಯೋಹಾನ 15:11; 16:24; 17:13; ಅಪೊ 5:41; 8:39; 16:34; ರೋಮಾ 5:2-3,11; 14:17; 2 ಕೊರಿಂಥ 6:10; 8:2; ಗಲಾ 5:22; 1 ಥೆಸ 1:6). "ಆಲೋಚಿಸಿ" –ಪದವನ್ನು ಗಮನಿಸಿರಿ. ಈ ಪದಗಳು ಆತನು 3 ನೇ ವಾಕ್ಯದಿಂದ ಹೇಳಿರುವ ವಿಷಯಗಳನ್ನು ಸೂಚಿಸುತ್ತವೆ. ಹರ್ಷವು ನಾಲ್ಕು ವಿಷಯಗಳಿಂದ ಬರುತ್ತದೆ ಎಂದು ಆತನು ಹೇಳಿದ್ದಾನೆ: ಹೊಸ ಜನನ ಜೀವವುಳ್ಳ ನಿರೀಕ್ಷೆ ಪರಲೋಕದಲ್ಲಿ ಮುಂದೆ ಸಿಗುವ ಬಾಧ್ಯತೆಯ ತಿಳುವಳಿಕೆ ಮತ್ತು ದೇವರ ಕಾಯುವ ಶಕ್ತಿಯ ಭರವಸೆ.

*"ಸದ್ಯಕ್ಕೆ"*– ನಮ್ಮ ಹೃದಯಗಳಲ್ಲಿ ದೇವರ ಹರ್ಷ ನೆಲೆಯಾಗುವದನ್ನು ಅಡ್ಡಿಪಡಿಸುವಂಥ ಕೆಲವು ಅನುಭವಗಳಿವೆ. ಅವುಗಳಲ್ಲಿ ಪಾಪವೂ ಒಂದು (ಕೀರ್ತನೆ 32:3-5; 51:3-4,8,12). ಸಂದೇಹವು ಇನ್ನೊಂದು (ಮತ್ತಾಯ 14:29-31; ಲೂಕ 24:37-38; ಯಾಕೋಬ 1:6). ಸುಳ್ಳು ಬೋಧನೆಗೆ ಒಳಗಾಗುವದು ಮತ್ತೊಂದು (ಗಲಾ 3:1-3; 4:15-17). ಕಷ್ಟಗಳು ಇನ್ನೊಂದು (ಯೋಬ 3:1-26), ಆದರೆ ಅವುಗಳು ಹಾಗಿರುವ ಅವಶ್ಯಕತೆಯಿಲ್ಲ. ಬಲವಾದ ನಂಬಿಕೆಯುಳ್ಳವರು ಅತ್ಯಂತ ಗಂಭೀರವಾದ ಕಷ್ಟಗಳ ಸಮಯದಲ್ಲಿಯೂ ಹರ್ಷಿಸುತ್ತಾರೆ (ಅಪೊ 5:41; 2 ಕೊರಿಂಥ 12:7-10; ಕೊಲೊ 1:24; ಯಾಕೋಬ 1:12). ಆದ್ದರಿಂದ ನಿರಾಸೆ ಮತ್ತು ಸಂತೋಷ ಒಂದೇ ಸಮಯದಲ್ಲಿ ನಮ್ಮಲ್ಲಿ ಇರುತ್ತವೆ (2 ಕೊರಿಂಥ 6:8-10). ಕಷ್ಟಗಳು "ಸ್ವಲ್ಪ ಕಾಲ" ಮಾತ್ರವೇ ಎಂದು ಹೇಳಿರುವದನ್ನು ಗಮನಿಸಿರಿ (2 ಕೊರಿಂಥ 4:17). 7

**1:7** ಬಂಗಾರವನ್ನು ಶೋಧಿಸಲು ಮತ್ತು ದೃಢಪಡಿಸಲು ಬೆಂಕಿಯನ್ನು ಉಪಯೋಗಿಸಲಾಗುತ್ತದೆ. ದೇವರು ವಿಶ್ವಾಸಿಗಳನ್ನು ಇದೇ ಕಾರಣಗಳಿಗೆ ಗಂಭೀರವಾದ ಕಷ್ಟಗಳಿಗೆ ಒಳಪಡಿಸುತ್ತಾನೆ. ಕೀರ್ತನೆ 66:10-12 ರೊಂದಿಗೆ ಹೋಲಿಸಿ ನೋಡಿರಿ. ನಂಬಿಕೆಯು ಬಂಗಾರಕ್ಕಿಂತಲೂ ಅಮೂಲ್ಯವಾಗಿದೆ. ಮಾನವರು ನಂಬಿಕೆಯನ್ನು ನಿರ್ಲಕ್ಷಿಸಿ ಬಂಗಾರ ಮತ್ತು ಈ ಲೋಕದ ಇತರೆ ನಿಕ್ಷೇಪಗಳ ಹಿಂದೆ ಹೋಗುವದು ದುಃಖದ ಸಂಗತಿಯಲ್ಲವೇ? ನಂಬಿಕೆಯು ಅತ್ಯಂತ ಅಮೂಲ್ಯವಾಗಿದೆ ಯಾಕಂದರೆ ಅದು ಪರಲೋಕದಲ್ಲಿ ನಿತ್ಯವಾದ ನಿಕ್ಷೇಪಗಳನ್ನು ಒದಗಿಸುತ್ತದೆ.

*"ಶೋಧಿತವಾಗಿ"*– ಈ ಪದ "ಕಷ್ಟ" ಎಂಬ ಗ್ರೀಕ್ ಪದ ಕೊಡುವ ಅರ್ಥಕ್ಕಿಂತಲೂ ಉತ್ತಮವಾದ ಅರ್ಥವನ್ನು ಕೊಡುತ್ತದೆ. ಕಷ್ಟಗಳು (ವ 6 – ಇಲ್ಲಿ ಕೊಡಲಾಗಿರುವ ಗ್ರೀಕ್ ಪದಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ) ನಾವು ನಿಜವಾಗಿಯೂ ನಂಬುತ್ತೇವೆಯೋ ಅಥವಾ

ಕೇವಲ ಅಂದುಕೊಳ್ಳುತ್ತೇವೆಯೋ ಅಥವಾ ನಂಬುತ್ತೇವೆ ಎಂದು ಬಾಯಿ ಮಾತಿನಲ್ಲಿ ಮಾತ್ರವೇ ಹೇಳುತ್ತೇವೋ ಎಂಬದನ್ನು ಪ್ರಕಟಿಸುತ್ತದೆ. ನಾವು ಘೋರವಾದ ಕಷ್ಟಗಳ ಸಮಯದಲ್ಲಿಯೂ ನಂಬುತ್ತಾ ಲೋಕದ ಕಡೆಗೆ ತಿರುಗಿಕೊಳ್ಳದೆ ಇದ್ದರೆ, ನಮ್ಮ ನಂಬಿಕೆ ಯಥಾರ್ಥವಾದದ್ದು ಎಂಬದಕ್ಕೆ ಇದುವೇ ಸೂಕ್ತವಾದ ಪುರಾವೆಯಾಗಿದೆ. ಮತ್ತಾಯ 13:21,23; ಇಬ್ರಿ 10:32,39 ರೊಂದಿಗೆ ಹೋಲಿಸಿ ನೋಡಿರಿ. **8**

**1:8** *"ಪ್ರೀತಿ"*– ಯೋಹಾನ 14:15; 21:16; 1 ಕೊರಿಂಥ 13:7; 16:22; ಗಲಾ 5:6 – ನಂಬಿಕೆಯು ಯಥಾರ್ಥವಾದದ್ದು ಎಂಬದಕ್ಕೆ ಇಲ್ಲಿ ಹೆಚ್ಚಿನ ಸಾಕ್ಷಿಯನ್ನು ನೋಡಬಹುದಾಗಿದೆ. ನಿಜವಾದ ನಂಬಿಕೆ ಮತ್ತು ಯೇಸು ಕ್ರಿಸ್ತನ ಮೇಲಿನ ಪ್ರೀತಿ ಜೊತೆಜೊತೆಯಾಗಿ ಸಾಗುವಂಥವುಗಳಾಗಿವೆ. ಒಂದುವೇಳೆ ನಮ್ಮಲ್ಲಿ ಒಂದು ಇಲ್ಲವೆಂದರೆ, ಇನ್ನೊಂದು ಇರಲು ಆಗುವದಿಲ್ಲ.

*"ಆತನನ್ನು ಕಾಣದಿದ್ದರೂ"*– ನಮ್ಮ ಕಣ್ಣಿಗೆ ಕಾಣದೆ ಇರುವವನನ್ನು ಪ್ರೀತಿಸಲು ಮತ್ತು ಆತನಲ್ಲಿ ನಂಬಿಕೆಯನ್ನಿಡಲು ಸಾಧ್ಯವೇ? ಖಂಡಿತವಾಗಿಯೂ ಸಾಧ್ಯ. ಯೇಸು ಕ್ರಿಸ್ತನ ವಾಕ್ಯ ಮತ್ತು ಆತನ ಆತ್ಮನು ನಮಗೆ ಇರುವದಿಂದ, ವಿಶ್ವಾಸಿಗಳಿಗೆ ಆತನ ಪರಿಚಯವಾಗುತ್ತದೆ.

*"ಸಂತೋಷ"*– ವ 6; ನೆಹೆ 8:10; ಕೀರ್ತನೆ 4:7; 16:11; 21:6; 28:7; 43:4; 81:1; ಯೆಶಾಯ 12:3; 35:6,10; ಲೂಕ 2:10; ಯೋಹಾನ 16:20-24.

*"ಹೇಳಲಶಕ್ಯವಾದದ್ದು"*– "ವಿವರಿಸಲು ಆಗದೆ ಇರುವಂಥದ್ದು" ಇಂದು ಸಹಜವಾಗಿ ಒಳ್ಳೆಯ ಅರ್ಥವಿಲ್ಲ. **9**

**1:9** *"ಹೊಂದುವದು"*– ವ 5. ಈಗಲೂ ಕಷ್ಟಗಳ ನಡುವೆ ವಿಶ್ವಾಸಿಗಳು ನಂತರದಲ್ಲಿ ಅನುಭವಿಸುವ ರಕ್ಷಣೆಯನ್ನು ಪೂರ್ತಿಯಾಗಿ ಅನುಭವಿಸುತ್ತಾ ಇದ್ದಾರೆ. **10**

**1:10** *"ಪ್ರವಾದಿಗಳು"*– ಆತನು ಹಳೆ ಒಡಂಬಡಿಕೆಯ ಪ್ರವಾದಿಗಳ ಬಗ್ಗೆ ಮಾತನಾಡುತ್ತಾ ಇದ್ದಾನೆ (ಆದಿ 20:7 ರಲ್ಲಿ ಪ್ರವಾದಿಗಳ ಕುರಿತಾದ ನೋಟ್ ನೋಡಿರಿ). ಈಗ ವಿಶ್ವಾಸಿಗಳಿಗೆ ದೊರೆಯುವ ಕೃಪೆಯ ಬಗ್ಗೆ ಅವರು ಬರೆದಿದ್ದಾರೆ. ಅವರ ಬರವಣಿಗೆಗಳು ಯೇಸು ಕ್ರಿಸ್ತನ ಕುರಿತಾದ ಪ್ರವಾದನೆಗಳು, ಚಿತ್ರಣಗಳು, ವಿಧಗಳು ಮತ್ತು ಸಂಕೇತಗಳು ಹಾಗೂ ಆತನಿಂದ ದೊರೆಯುವ ರಕ್ಷಣೆಯ ಬಗ್ಗೆ ತಿಳಿಸುತ್ತವೆ (ಲೂಕ 4:17-21; 24:25-27,45-47; ಯೋಹಾನ 5:39,46; ಇಬ್ರಿ 8:5; 10:1). **11**

**1:11** ಯೇಸು ಕ್ರಿಸ್ತನ ಆತ್ಮನು ಹಳೆ ಒಡಂಬಡಿಕೆಯ ಪ್ರವಾದಿಗಳಲ್ಲಿ ಇದ್ದನು ಮತ್ತು ಅವರಿಗೇ ಪೂರ್ತಿಯಾಗಿ ಅರ್ಥವಾಗಿರದ ವಿಷಯಗಳನ್ನು ಬರೆಯುವಂತೆ ಅವರನ್ನು ಪ್ರೋತ್ಸಾಹಪಡಿಸಿದನು. ಅವುಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳುವ ಸಲುವಾಗಿ ಅವರು ತಮ್ಮದೇ ಬರವಣಿಗೆಗಳನ್ನು ಅಧ್ಯಯನ ಮಾಡುತ್ತಾ ಇದ್ದರು. ಯೇಸು ಕ್ರಿಸ್ತನು ಈ ಲೋಕಕ್ಕೆ ಬರುವದಕ್ಕಿಂತ ಮುಂಚಿತವಾಗಿಯೇ ಯೇಸು ಕ್ರಿಸ್ತನು ಆತ್ಮನು ಈ ಲೋಕದಲ್ಲಿ

ಇದ್ದನು ಎಂಬದನ್ನು ಗಮನಿಸಿರಿ. ಆತನು ಯೇಸು ಕ್ರಿಸ್ತನ ಶ್ರಮೆಗಳು ಮತ್ತು ಪ್ರಭಾವವನ್ನು "ಮುಂಚಿತವಾಗಿಯೇ" ತಿಳಿಸಿದನು. ಉದಾಹರಣೆಗೆ ಕೀರ್ತ 22 ರೊಂದಿಗೆ ಹೋಲಿಸಿ ನೋಡಿರಿ – 1-21 ವಚನಗಳಲ್ಲಿ ಶ್ರಮೆಗಳನ್ನು ನೋಡಬಹುದು, 22-31 ವಚನಗಳಲ್ಲಿ ಪ್ರಭಾವವನ್ನು ನೋಡಬಹುದು. ಯೆಶಾಯ 53 ನೇ ಅಧ್ಯಾಯದಲ್ಲಿಯೂ ಇದನ್ನು ನೋಡಬಹುದಾಗಿದೆ. 1-9 ವಚನಗಳಲ್ಲಿ ಶ್ರಮೆಗಳನ್ನು ನೋಡಬಹುದು, 10-12 ವಚನಗಳಲ್ಲಿ ಪ್ರಭಾವವನ್ನು ನೋಡಬಹುದು. ಶ್ರಮೆಗಳು ಮತ್ತು ಪ್ರಭಾಗಳು ಎರಡೂ ಯೆಶಾಯ 52:13-15 ರಲ್ಲಿ ಬರೆಯಲ್ಪಟ್ಟಿವೆ ಹಾಗೂ ಯೆಶಾಯ 54 ರಲ್ಲಿ ಪ್ರಭಾವವು ಬರೆಯಲ್ಪಟ್ಟಿದೆ. ಇತರೆ ಉದಾಹರಣೆಗಳನ್ನು ನೋಡಬಹುದು. ದೇವರು ಪ್ರವಾದಿಗಳಿಗೆ ನಿಮ್ಮ ಪ್ರವಾದನೆಗಳು ನಂತರದಲ್ಲಿ ನೆರವೇರುವವು, ನೀವು ಮುಂದಿನ ಸಂತತಿಯವರಿಗಾಗಿ ಇವುಗಳನ್ನು ಪ್ರವಾದಿಸುತ್ತಾ ಇರುವಿರಿ ಎಂದು ಪ್ರಕಟಿಸಿದನು. ಹಳೆ ಒಡಂಬಡಿಕೆಯು ಕ್ರೈಸ್ತ ವಿಶ್ವಾಸಿಗಳ ಸೂಚನೆಗಾಗಿ ಕೊಡಲಾಗಿದೆ (ರೋಮಾ 15:4; 1 ಕೊರಿಂಥ 10:11). ಸುವಾರ್ತಾ ಬೋಧಕರು ಈ ಪ್ರಕಟಿಸುತ್ತಿರುವ – ಯೇಸು ಕ್ರಿಸ್ತನ ಮರಣ, ಪುನರುತ್ಥಾನ ಮತ್ತು ಆರೋಹಣದ ವಿಷಯಗಳನ್ನೇ ಅವರು ಪ್ರವಾದಿಸಿದರು. ಸುವಾರ್ತಾ ಬೋಧಕರೆಲ್ಲರೂ "ಪರಲೋಕದಿಂದ ಕಳುಹಿಸಲ್ಪಟ್ಟಿರುವ ಪವಿತ್ರಾತ್ಮನ ಮೂಲಕ" ಬೋಧಿಸಬೇಕು – ಯೋಹಾನ 14:16-17; ಲೂಕ 24:49; ಅಪೊ 1:4-5,8; 2:1-4.

"*ದೇವದೂತರು*"– ಆದಿ 16:7 ರ ನೋಟ್ ನೋಡಿರಿ. ವಿಶ್ವಾಸಿಗಳ ರಕ್ಷಣೆಯ ಕಾರ್ಯದಲ್ಲಿ ದೇವರು ಯೇಸು ಕ್ರಿಸ್ತನು ಮತ್ತು ಆತನ ಆತ್ಮನ ಮೂಲಕ ಮಾಡುತ್ತಿರುವ ಕಾರ್ಯಗಳೆಲ್ಲವೂ ಅವರಿಗೆ ಅರ್ಥವಾಗುತ್ತಾ ಇಲ್ಲ ಎಂಬದಾಗಿ ತೋರುತ್ತದೆ. ದೇವರು ಅವರಿಗೆ ಈಗ ಕಲಿಸುತ್ತಾ ಇದ್ದಾನೆ (ಎಫೆ 3:10). ಆದ್ದರಿಂದ ಈ ರಹಸ್ಯಗಳು ಬಹಳ ಪ್ರಸಿದ್ಧವಾಗಿರುವದರಿಂದ ಅವುಗಳನ್ನು ಹೆಚ್ಚಾಗಿ ತಿಳಿಯಲು ಅವರು ಬಯಸುತ್ತಾ ಇದ್ದಾರೆ. **13**

**1:13** ದೇವದೂತರು ರಕ್ಷಣೆಯ ಮಹದಾದ ಈ ಸುವಾರ್ತೆಯನ್ನು ತಿಳಿದುಕೊಳ್ಳಲು ಆಸಕ್ತರಾಗಿದ್ದಾರೆ. ಈ ರಕ್ಷಣೆಯನ್ನು ಹೊಂದಿರುವವರಾದ ನಾವು ಕಡಿಮೆ ಆಸಕ್ತರಾಗಿರಬೇಕೋ? ನಾವು ನೂತನ ಮನಸ್ಸುಳ್ಳವರಾಗಿರಬೇಕು (ರೋಮಾ 12:2; ಎಫೆ 4:23-24) ಮತ್ತು ನಮ್ಮ ಮನಸ್ಸುಗಳಿಗೆ ದೇವರ ವಾಕ್ಯಗಳನ್ನು ತುಂಬಿಸಿಕೊಳ್ಳಬೇಕು. ದೇವರು ನಮಗೆ ಪ್ರಕಟಿಸಿರುವದನ್ನೆಲ್ಲಾ ಅರ್ಥಮಾಡಿಕೊಳ್ಳಲು ನಾವು ಪ್ರಯತ್ನಿಸುವಾಗ ಕ್ರೈಸ್ತೀಯ ಜೀವಿತವು ಆಲೋಚನೆ, ಧ್ಯಾನ ಮತ್ತು ಎಚ್ಚರಿಕೆಯ ಅಧ್ಯಯನದಲ್ಲಿ ಪರಿಶ್ರಮವನ್ನು ಬೇಡುತ್ತದೆ. ಕೀರ್ತನೆ 1:2; 119:26-27,34,73 ಇತ್ಯಾದಿ; ಎಫೆ 1:18; 3:18; ಫಿಲಿಪ್ಪಿ 1:9-10; ಕೊಲೊ 1:9 ರೊಂದಿಗೆ ಹೋಲಿಸಿ ನೋಡಿರಿ.

"*ನೀವು ಮನಸ್ಸಿನ ನಡುವನ್ನು ಕಟ್ಟಿಕೊಳ್ಳಿರಿ*"– ಅಕ್ಷರಾರ್ಥವಾಗಿ ಉದ್ದವಾಗಿರುವ ನಿಲುವಂಗಿಯ ನಡುವನ್ನು ಕಟ್ಟಿಕೊಳ್ಳುವದು ಕ್ರಿಯೆಯಾಗಿ ಸಿದ್ಧರಾಗುವದನ್ನು

ಸೂಚಿಸುತ್ತದೆ. ವಿಶ್ವಾಸಿಗಳು ಮಾನಸಿಕ ಚಟುವಟಿಕೆಗೆ ಸಿದ್ಧರಾಗಬೇಕು.

*"ಸ್ವಸ್ಥಚಿತ್ತರು"*– ಅಲಂಕಾರಿಕವಾಗಿ ಗ್ರೀಕ್ ಪದದ ಅರ್ಥ "ಸ್ವನಿಯಂತ್ರಣವುಳ್ಳವರು" ಅಥವಾ ಬಹುಶಃ "ಸ್ವಸ್ಥವಾದ ಮನಸ್ಥಿತಿಯುಳ್ಳವರಾಗಿರುವದು".

*"ಕೃಪೆ"*– ದೇವರು ವಿಶ್ವಾಸಿಗಳಿಗೆ ಈಗಾಗಲೇ ಕೃಪೆಯನ್ನು ಕೊಟ್ಟಿದ್ದಾನೆ, ಆದರೂ ಇನ್ನೂ ಬಹಳಷ್ಟು ಕೃಪೆ ದೊರೆಯುತ್ತದೆ (ವ 4; ಎಫೆ 2:7). ಸಂತೋಷದಿಂದ ನಮ್ಮ ಕಷ್ಟಗಳು ಮತ್ತು ಶ್ರಮೆಗಳನ್ನು ಸಹಿಸಿಕೊಳ್ಳುವಂತೆ ನಮ್ಮನ್ನು ಬಲಪಡಿಸುವದರ ಮೇಲೆ ನಿರೀಕ್ಷೆಯನ್ನು ಸಂಪೂರ್ಣವಾಗಿ ಇಡುವದು.

*"ಯೇಸು ಕ್ರಿಸ್ತನ ಪ್ರಕಟನೆ"*– ವ 7; ಮತ್ತಾಯ 24:30; ತೀತ 2:13; ಇಬ್ರಿ 9:28. **14**

**1:14** *"ವಿಧೇಯರಾದ ಮಕ್ಕಳು"*– ವ 2. ದೇವರು ಇದನ್ನೇ ಬಯಸುವವನಾಗಿದ್ದಾನೆ – ವ 2; ರೋಮಾ 6:17-18; 2 ಕೊರಿಂಥ 2:9; 2 ಥೆಸ 2:8.

*"ಅನುಸರಿಸದೆ"*– ರೋಮಾ 12:2; 8:29.

*"ಆಶೆಗಳು"*– ಅಥವಾ "ದುರಾಸೆಗಳು" – ಮತ್ತಾಯ 15:19; ರೋಮಾ 1:24; 8:5; ಎಫೆ 2:1-3; ಆದಿ 8:21.

*"ಅಜ್ಞಾನಿಗಳು"*– ಯೋಹಾನ 15:21; ಅಪೊ 3:17; 17:30; 1 ಕೊರಿಂಥ 15:34; ಎಫೆ 4:18; 1 ತಿಮೊ 1:13. **15-16**

**1:15-16** ಯಾಜಕ 20:7; ಯೆಶಾಯ 6:3; ಯೋಹಾನ 17:17-19; ರೋಮಾ 6:19,22; 2 ಕೊರಿಂಥ 7:1; ಎಫೆ 4:24; ಇಬ್ರಿ 12:10,14. ಇದುವೇ ಪ್ರತಿಯೊಬ್ಬ ವಿಶ್ವಾಸಿಯ ಗುರಿಯಾಗಿರಬೇಕು, ಗುರಿಯಾಗಿದೆ. **15**

**1:15** *"ನಿಮ್ಮ ಎಲ್ಲಾ ನಡವಳಿಕೆಯಲ್ಲಿ"*– ನಾವು ನಮ್ಮ ಜೀವಿತವನ್ನು ಲೌಕಿಕ ಮತ್ತು ಪರಿಶುದ್ಧ ಎಂಬದಾಗಿ ವಿಭಜಿಸಲು ಪ್ರಯತ್ನಿಸಬಾರದು. ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಜೀವನಪರ್ಯಂತರ ಪರಿಶುದ್ಧರಾಗಿರಬೇಕು. **17**

**1:17** *"ತಂದೆ"*– ಮತ್ತಾಯ 5:16 ರ ನೋಟ್ ನೋಡಿರಿ.

*"ಪಕ್ಷಪಾತವಿಲ್ಲದೆ"*– ರೋಮಾ 12:11; ಎಫೆ 6:9; ಕೊಲೊ 3:25.

*"ಪ್ರವಾಸಕಾಲ"*– ವ 1. ಗ್ರೀಕ್ ಪದದ ಅರ್ಥ ಪ್ರವಾಸಿಯಾಗಿ, ಮನೆಯಿಂದ ದೂರ ಜೀವಿಸುವದು.

*"ಭಯಭಕ್ತಿ"*– 2:17; ಆದಿ 20:11; ಯೋಬ 28:28; ಕೀರ್ತನೆ 34:11-14; 86:11; 90:7-11; 111:10; ಜ್ಞಾನೋ 1:7; ಪ್ರಕ 14:7; 15:4; 19:5 ರ ನೋಟ್ಸ್ ನೋಡಿರಿ. ಒಬ್ಬನೇ ನಿಜವಾದ ದೇವರಿಗೆ ಭಕ್ತಿಯಿಂದ ಭಯಪಡುವದು ಮತ್ತು ಗೌರವಿಸುವದು ಹಾಗೂ ಸನ್ಮಾನಿಸುವದು, ಆತನನ್ನು ಅವಮಾನಪಡಿಸಲು ಅಥವಾ ಆತನಿಗೆ ಅಗೌರವ ತೋರಲು ಹೆದರುವದು – ಆತ್ಮೀಕ ಜೀವಿತದ ಪ್ರಧಾನ ಕಾರ್ಯಗಳಾಗಿವೆ. ಇದಿಲ್ಲದೆ ಹೋದರೆ ನಮ್ಮಲ್ಲಿ

ನಿಜವಾದ ಧರ್ಮ ಇರುವದಿಲ್ಲ. ಈ ಭಯ ನಾವು ದುಷ್ಟತನದಿಂದ ದೂರ ಓಡುವಂತೆ ಮತ್ತು ಒಳ್ಳೆಯ ಕಾರ್ಯವನ್ನು ಮಾಡುವಂತೆ ಹಾಗೂ ದೇವರಿಗೆ ಯೋಗ್ಯವಾದ ಆರಾಧನೆಯನ್ನು ಸಲ್ಲಿಸುವಂತೆ ನಮಗೆ ಸಹಾಯ ಮಾಡುತ್ತದೆ. ಈ ಕಾರಣದಿಂದಲೇ ಸತ್ಯವೇದದಲ್ಲಿ ಇದನ್ನು ಆಜ್ಞಾಪಿಸಲಾಗಿದೆ (2:17; ಪ್ರಕ 14:7). **18**

**1:18** *"ಬಿಡುಗಡೆ"*– ಕೀರ್ತನೆ 78:35; ಮತ್ತಾಯ 20:28 ರ ನೋಟ್ಸ್ ನೋಡಿರಿ.

*"ವ್ಯರ್ಥವಾದ ನಡವಳಿಕೆ"*– ಯೇಸು ಕ್ರಿಸ್ತನನ್ನು ನಂಬುವ ಮೊದಲು ನಾವೆಲ್ಲರೂ ವ್ಯರ್ಥವಾದ ನಡವಳಿಕೆಯುಳ್ಳವರಾಗಿದ್ದೆವು ಮತ್ತು ಯೇಸು ಕ್ರಿಸ್ತನನ್ನು ಅರಿಯದೆ ಇರುವವರು ಇದೇ ಸ್ಥಿತಿಯಲ್ಲಿರುವವರಾಗಿದ್ದಾರೆ (ಸತ್ಯವೇದದ ತಿಳುವಳಿಕೆಯ ಕೊರತೆಯಿರುವವರೂ, ಬೇರೆ ರೀತಿಯಲ್ಲಿ ಆಲೋಚಿಸುವವರಾಗಿದ್ದಾರೆ). ಪ್ರಸಂಗಿ 1:2; 2:11 ರೊಂದಿಗೆ ಹೋಲಿಸಿ ನೋಡಿರಿ. ಲೋಕದ ಕಾರ್ಯಗಳಲ್ಲಿ ಆಸಕ್ತರಾಗಿರುವದು ವ್ಯರ್ಥವಾಗಿದೆ. ನಮ್ಮಲ್ಲಿ ಯಾರಾದರೂ ಜೀವನದಲ್ಲಿರುವ ವ್ಯರ್ಥವಾದ ಕಾರ್ಯಗಳನ್ನು ಅನುಭವಿಸುತ್ತಾ ಇದ್ದೇವೋ? ಯೇಸು ಕ್ರಿಸ್ತನ ಕಡೆಗೆ ತಿರುಗಿಕೊಳ್ಳೋಣ. ಆತನು ನಮ್ಮ ಜೀವಿತಗಳನ್ನು ಅರ್ಥ, ಉದ್ದೇಶ ಮತ್ತು ನಿರೀಕ್ಷೆಯಿಂದ ತುಂಬಿಸುತ್ತಾನೆ. **19**

**1:19** ನಮ್ಮನ್ನು ಬಿಡುಗಡೆ ಮಾಡಿ ತನಗೆ ಸ್ವಂತರನ್ನಾಗಿ ಮಾಡಿಕೊಳ್ಳಲು ದೇವರು ಕೊಟ್ಟ ಕ್ರಯವನ್ನು ನಾವು ಇಲ್ಲಿ ನೋಡಬಹುದಾಗಿದೆ (ಮತ್ತಾಯ 20:28; 26:28; ಅಪೊ 20:28; ರೋಮಾ 3:24-25). ಅದು ಮಾತುಗಳಿಗಿಂತಲೂ ಅಮೂಲ್ಯವಾಗಿದೆ.

*"ಕುರಿಮರಿ"*– ಯೋಹಾನ 1:29.

*"ನಿಷ್ಕಳಂಕ"*– 2:22; ಇಬ್ರಿ 4:15; 7:26; ವಿಮೋ 12:5; ಯಾಜಕ 1:3. ಯೇಸು ಕ್ರಿಸ್ತನು ರಕ್ತ ಸುರಿಸದೆ ಹೋಗಿದ್ದರೆ ಯಾರಿಗೂ ರಕ್ಷಣೆಯೇ ಸಿಗುತ್ತಾ ಇರಲಿಲ್ಲ (ಇಬ್ರಿ 9:22). **20**

**1:20** ಆತನು ಲೋಕವನ್ನು ಸೃಷ್ಟಿಸುವದಕ್ಕಿಂತ ಮೊದಲು, ಮಾನವರು ಪಾಪದೊಳಗೆ ಬೀಳುವ ಮೊದಲು, ಮಾನವರ ರಕ್ಷಣೆಗಾಗಿ ದೇವರು ಯೋಜನೆಯನ್ನು ಮಾಡಿದ್ದನು ಮತ್ತು ಯೇಸು ಕ್ರಿಸ್ತನು ಆ ಯೋಜನೆಯ ಪ್ರಮುಖನಾಗಿದ್ದನು. ಎಫೆ 1:4; ಅಪೊ 2:23 ರೊಂದಿಗೆ ಹೋಲಿಸಿ ನೋಡಿರಿ. **21**

**1:21** *"ಆತನ ಮೂಲಕ"*– ಯೇಸು ಕ್ರಿಸ್ತನ ಮೂಲಕ ಮಾತ್ರವೇ ಜನರು ಜೀವಿಸುವ ದೇವರಲ್ಲಿ ನಂಬಿಕೆಯನ್ನಿಡುತ್ತಾರೆ ಎಂದು ಪೇತ್ರನು ಹೇಳುತ್ತಾ ಇದ್ದಾನೆ. ಯೇಸು ಕ್ರಿಸ್ತನು ಇಲ್ಲದೆ ಹೋದರೆ ನಾವು ದೇವರಲ್ಲಿ ನಂಬಿಕೆ ಇಟ್ಟಿದ್ದೇವೆ ಎಂದು ಜನರು ಅಂದುಕೊಳ್ಳುತ್ತಾರೆ ಆದರೆ ಅವರು ನಂಬಿಕೆ ಇಟ್ಟಿರುವದಿಲ್ಲ.

*"ಆತನಿಗೆ ಮಹಿಮೆ ಕೊಟ್ಟನು"*– ಅಪೊ 2:32-33; 3:13; ಯೋಹಾನ 17:1. ದೇವರು ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಿಂದ ನಾವು ನಿಜವಾದ ದೇವರಲ್ಲಿ ನಮ್ಮ ನಂಬಿಕೆ ಹಾಗೂ ನಿರೀಕ್ಷೆಯನ್ನಿಡಲು ಸಾಧ್ಯವಾಗುತ್ತದೆ – ವ 3. **22**

**1:22** ಶುದ್ಧರಾಗಿರಲು ಮತ್ತು ಶುದ್ಧಗೊಳ್ಳಲು ಇರುವ ಒಂದೇ ಮಾರ್ಗವನ್ನು ಗಮನಿಸಿರಿ – ಸತ್ಯವೇದದಲ್ಲಿರುವ ದೇವರ ಸತ್ಯಕ್ಕೆ ವಿಧೇಯರಾಗಿರುವದೊಂದೇ ಮಾರ್ಗವಾಗಿದೆ. ರೋಮಾ 6:17-19; ಯೋಹಾನ 8:31-32 ರೊಂದಿಗೆ ಹೋಲಿಸಿ ನೋಡಿರಿ. ಈ ಶುದ್ಧೀಕರಣದ ಫಲಿತಾಂಶವೇ ಯಥಾರ್ಥವಾದ ಪ್ರೀತಿಯಾಗಿದೆ. ದೇವಜನರ ಮೇಲೆ ನಮ್ಮ ಹೃದಯಗಳಲ್ಲಿ ಒಂದುವೇಳೆ ಪ್ರೀತಿ ಇಲ್ಲದೆ ಹೋದರೆ, ನಮ್ಮಲ್ಲಿ ನಿಜವಾದ ಶುದ್ಧೀಕರಣ, ರಕ್ಷಣೆಯಿಲ್ಲ ಎಂಬ ದೃಢತೆ ನಮಗಿರುವದಾಗಿದೆ (1 ಯೋಹಾನ 3:14; ಯೋಹಾನ 13:34). ವಿಶ್ವಾಸಿಗಳು ಒಬ್ಬರ ಮೇಲೊಬ್ಬರು ಯಾವ ರೀತಿಯ ಪ್ರೀತಿಯುಳ್ಳವರಾಗಿರಬೇಕು ಎಂಬದನ್ನು ಇಲ್ಲಿ ನೋಡಬಹುದು – ನಿಷ್ಕಪಟ, ಹೃದಯಪೂರ್ವಕ ಮತ್ತು ಯಥಾರ್ಥ. **23**

**1:23** *"ಪುನರ್ಜನ್ಮ"*– ವ 3; ಯೋಹಾನ 1:13. ದೇವರ ವಾಕ್ಯವು ನಾಶವಾಗದಂಥ ಬೀಜವಾಗಿದೆ. ಪುನರ್ಜನ್ಮವು ಹೃದಯದಲ್ಲಿ ನೆಡಲ್ಪಟ್ಟಿರುವ ದೇವರ ವಾಕ್ಯದ ಮೂಲಕ ಉಂಟಾಗುತ್ತದೆ (ಯಾಕೋಬ 1:18). **24-25**

**1:24-25** ಯೆಶಾಯ 40:6-8. ದೇವರನ್ನು ಬಿಟ್ಟು ಮಾನವರು ಮಾಡುವ ಅಥವಾ ಮಾಡಲು ಮುಂದಾಗುವ ಯಾವ ಕಾರ್ಯಗಳಿಗೂ ಪ್ರಾಮುಖ್ಯತೆ ಇರುವದಿಲ್ಲ. ದೇವರ ವಾಕ್ಯ (ಮತ್ತು ದೇವರ ವಾಕ್ಯದ ಮೂಲಕ ಕೊಡಲಾಗುವ ಹೊಸ ಜೀವನವು) ಶಾಶ್ವತವಾಗಿರುವದು – ಮತ್ತಾಯ 24:35; 1 ಯೋಹಾನ 2:17.

# 2 1

**2:1** ಎಫೆ 4:25,29,31; ಕೊಲೊ 3:5-10. ಈ ಕಾರ್ಯಗಳೆಲ್ಲವೂ ಹಳೆಯ ಸ್ವಭಾವದವುಗಳಾಗಿವೆ ಮತ್ತು ವಿಶ್ವಾಸಿಗಳ ಜೀವನದಲ್ಲಿ ಇವುಗಳಿಗೆ ಯಾವುದೇ ಅವಕಾಶ ಇರಬಾರದು (ಗಲಾ 5:19-21). **2**

**2:2** *"ಹಸುಮಕ್ಕಳು"*– ಆತನು ಹೊಸ ವಿಶ್ವಾಸಿಗಳ ಬಗ್ಗೆ ಮಾತನಾಡುತ್ತಾ ಇದ್ದಾನೆ ಎಂಬದಾಗಿ ಅನ್ನಿಸುತ್ತದೆ. ಅಥವಾ ಹಿರಿಯ ಕ್ರೈಸ್ತರು ತಮ್ಮ ಕ್ರೈಸ್ತೀಯ ಜೀವಿತದಲ್ಲಿ ನಿಧಾನವಾಗಿ ಬೆಳವಣಿಗೆಯನ್ನು ಕಾಣುತ್ತಾ ಇರುವದಕ್ಕೆ ಅವರನ್ನು ಗದರಿಸುತ್ತಾ ಇರಬಹುದು (1 ಕೊರಿಂಥ 3:1-2; ಇಬ್ರಿ 5:11-14 ರೊಂದಿಗೆ ಹೋಲಿಸಿ ನೋಡಿರಿ). ಅಥವಾ ಯೇಸು ಕ್ರಿಸ್ತನ ಬರೋಣದ ನಂತರ ನಾವೇನಾಗಿರುವೆವು ಎಂಬದಕ್ಕೆ ಹೋಲಿಸಿದರೆ ಈಗ ನಾವೆಲ್ಲರೂ ಹಸು ಮಕ್ಕಳಾಗಿದ್ದೇವೆ ಎಂಬದು ಆತನ ಮಾತಿನ ಅರ್ಥವಾಗಿರಬಹುದು (ಮತ್ತಾಯ 18:3 ರೊಂದಿಗೆ ಹೋಲಿಸಿ ನೋಡಿರಿ). ಹಸುಮಕ್ಕಳ ಮೂರು ಗುಣಗಳನ್ನು ನಾವು ಯಾವಾಗಲೂ ಪಾಲಿಸುವವರಾಗಿರಬೇಕು: ಆತ್ಮೀಕ ಪೋಷಣೆಯ ಬಯಕೆ ಮುಗ್ಧತೆ ಮತ್ತು ಸರಳತೆ ಮತ್ತು ದೇವರನ್ನು ಆತುಕೊಳ್ಳುವಿಕೆ. ಆತ್ಮೀಕ ವಿಷಯಗಳ ಹಸಿವು ಇಲ್ಲದೆ ಹೋದರೆ, ದೇವರ ವಾಕ್ಯಗಳ ಬಯಕೆ ಇಲ್ಲವೆಂದರೆ, ಒಬ್ಬ ವ್ಯಕ್ತಿಯಲ್ಲಿ ಆತ್ಮೀಕ ಜೀವನವಿಲ್ಲ ಎಂಬದಕ್ಕೆ

ಅದುವೇ ಗುರುತಾಗಿದೆಯೇ?

*"ಶುದ್ಧ ಹಾಲು"*– "ಶುದ್ಧ" ಎಂದು ಭಾಷಾಂತರ ಮಾಡಲಾಗಿರುವ ಗ್ರೀಕ್ ಪದದ ಅರ್ಥ "ಮಲಿನಗೊಳ್ಳದಿರುವದು" ಅಥವಾ "ಹಾಳಾಗದೆ ಇರುವದು" (ಶುದ್ಧ). ನಮಗೆ ಅವಶ್ಯವಾಗಿರುವ ಹಾಲು ದೇವರ ವಾಕ್ಯದ ಬೋಧನೆಯಾಗಿದೆ. ನಾವೆಲ್ಲರೂ ಇದನ್ನು ಬಯಸುವವರಾಗಿರಬೇಕು, ಹೊಸ ವಿಶ್ವಾಸಿಗಳು ಮತ್ತು ಹಳೆಯವರು ಸಮಾನರಾಗಿರಬೇಕು (ಕೀರ್ತನೆ 119:40,131).

*"ಬೆಳೆಯಿರಿ"*– ಎಫೆ 4:13-15. **3**

**- 2:3** ಕೀರ್ತನೆ 34:8. **4**

**2:4** *"ಜೀವವುಳ್ಳ ಕಲ್ಲು"*– ಕರ್ತನಾದ ಯೇಸು ಕ್ರಿಸ್ತನು. ವಿಶ್ವಾಸಿಗಳು ಜೀವವಿಲ್ಲದ ವಿಗ್ರಹಗಳ ಬಳಿಗೆ ಹೋಗುವದಿಲ್ಲ ಬದಲಾಗಿ ಜೀವವುಳ್ಳ ವ್ಯಕ್ತಿಯ ಬಳಿಗೆ ಹೋಗುತ್ತಾರೆ.

*"ನಿರಾಕರಣೆ"*– ಮತ್ತಾಯ 21:42; ಮಾರ್ಕ 8:31; 9:12; ಲೂಕ 17:25; ಯೋಹಾನ 1:11; ಅಪೊ 4:11.

*"ಅಮೂಲ್ಯರು"*– ಮತ್ತಾಯ 3:17. ಮನುಷ್ಯನ ಆಲೋಚನೆಗಳಿಗಿಂತ ದೇವರ ಆಲೋಚನೆಗಳು ಎಷ್ಟು ಭಿನ್ನವಾಗಿವೆ ಎಂಬದನ್ನು ಗಮನಿಸಿರಿ. ಮಾನವರು ತಾವು ನಿರ್ಮಿಸುತ್ತಿರುವ ಕಟ್ಟಡಕ್ಕೆ ಯೇಸು ಕ್ರಿಸ್ತನು ಯೋಗ್ಯನಲ್ಲ ಎಂದು ಯೋಚನೆ ಮಾಡಲಿಲ್ಲ. **5**

**2:5** *"ಜೀವವುಳ್ಳ ಕಲ್ಲುಗಳು"*– ಜೀವವುಳ್ಳ ಕಲ್ಲಾದ ಯೇಸು ಕ್ರಿಸ್ತನ ಬಳಿಗೆ ಬರುವ ವಿಶ್ವಾಸಿಗಳು ಜೀವವುಳ್ಳ ಕಲ್ಲುಗಳಾಗುತ್ತಾರೆ. ಯಾಕಂದರೆ ಜೀವವುಳ್ಳ ಕಲ್ಲು "ಜೀವವನ್ನು ಕೊಡುವ ಆತ್ಮವಾಗಿದ್ದಾನೆ" –(1 ಕೊರಿಂಥ 15:45).

*"ಮಂದಿರ"*– ಎಫೆ 2:19-22; ಇಬ್ರಿ 3:6; 1 ಕೊರಿಂಥ 3:9. ದೇವರು ವಾಸ್ತುಶಿಲ್ಪಿ ಮತ್ತು ನಿರ್ಮಾಣಿಕನಾಗಿದ್ದಾನೆ. ಆತನು ತನ್ನ ಮಂದಿರಕ್ಕಾಗಿ ಉತ್ತಮವಾದ ಯೋಜನೆ ಮಾಡಿದ್ದಾನೆ ಎಂಬ ದೃಢತೆ ನಮಗಿರಬೇಕು. ಆತನಿಗೆ ಪ್ರತಿಯೊಂದು ಕಲ್ಲು ಮತ್ತು ಅದು ಎಲ್ಲಿ ಇರಬೇಕು ಎಂಬದು ಗೊತ್ತು. ಇದಲ್ಲದೆ ಆತನು ಖಂಡಿತವಾಗಿಯೂ ಕೆಲವು ಕಲ್ಲುಗಳನ್ನು ತೆಗೆದು ಅವುಗಳ ಜಾಗದಲ್ಲಿ ಬೇರೆ ಕಲ್ಲುಗಳನ್ನು ಇಡುತ್ತಾನೆ. ಆದರೆ ದೇವರು ಖಂಡಿತವಾಗಿಯೂ ಒಂದು ಕೈಯಿಂದ ಕೆಡವುವದು, ಇನ್ನೊಂದು ಕೈಯಿಂದ ಕಟ್ಟುವದನ್ನು ಮಾಡುವದಿಲ್ಲ. ಎಫೆ 2:21 ರ ನೋಟ್ ನೋಡಿರಿ.

*"ಯಾಜಕತ್ವ"*– ವಿಶ್ವಾಸಿಗಳು ದೇವರ ಮಂದಿರಕ್ಕೆ ಕಟ್ಟಲ್ಪಡುವದು ಮಾತ್ರವಲ್ಲ, ಅವರೆಲ್ಲರೂ ಆತನ ಮಂದಿರದಲ್ಲಿ ಸೇವೆ ಮಾಡುವ ಯಾಜಕರಾಗಿದ್ದಾರೆ – ವ 9; ಪ್ರಕ 1:6; ಇಬ್ರಿ 10:19-22. ಹೊಸ ಒಡಂಬಡಿಕೆಯಲ್ಲಿ ವಿಶ್ವಾಸಿಗಳ ಮಧ್ಯದಿಂದ ಪ್ರತ್ಯೇಕವಾಗಿ ಯಾಜಕರನ್ನು ಆರಿಸಿಕೊಳ್ಳಲಾಗುವದಿಲ್ಲ. ವಿಶ್ವಾಸಿಗಳೆಲ್ಲರೂ ಯಾಜಕರಾಗಿದ್ದಾರೆ.

ಅಮೋಘವಾದ ಸತ್ಯವೇನೆಂದರೆ ಹೊಸ ಒಡಂಬಡಿಕೆಯಲ್ಲಿ ವ್ಯಕ್ತಿಗತವಾಗಿ ಯಾವ ಶಿಷ್ಯನಾಗಲಿ ಅಥವಾ ಯೇಸು ಕ್ರಿಸ್ತನ ಅಪೊಸ್ತಲನಾಗಲಿ ಯಾಜಕನಾಗಿ ಕರೆಯಲ್ಪಟ್ಟಿಲ್ಲ. ಇದಲ್ಲದೆ ಯೇಸು ಕ್ರಿಸ್ತನು ಸಭೆಗೆ ನಾಯಕರಾಗಿ ನೇಮಿಸಿರುವವರಲ್ಲಿಯೂ ಯಾಜಕೋದ್ಯೋಗವು ನೇಮಕವಾಗಿಲ್ಲ (ಎಫೆ 4:11; 1 ಕೊರಿಂಥ 12:28). ಇದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ.

"*ಆತ್ಮೀಯ ಯಜ್ಞಗಳು*"– ರೋಮಾ 12:1; ಇಬ್ರಿ 13:15-16. ಯಾಜಕರು ದೇವರಿಗೆ ಏನಾದರೂ ಸಮರ್ಪಿಸಬೇಕು. ಯಾಜಕರಾಗಿರುವ ವಿಶ್ವಾಸಿಗಳು ತಮ್ಮನ್ನು, ತಮ್ಮ ಸ್ತುತಿಯನ್ನು ಮತ್ತು ತಮ್ಮ ಪ್ರೀತಿ ಹಾಗೂ ದಯೆಯ ಕಾರ್ಯಗಳನ್ನು ಅರ್ಪಿಸಬೇಕು. **6**

**2:6** ವಚನ 4; ಯೆಶಾಯ 28:16; ಜೆಕರ್ಯ 1:4; ಎಫೆ 2:20. **7**

**2:7** "*ಅಮೂಲ್ಯ*"– 1:8. ಆತನಲ್ಲಿ ನಂಬಿಕೆಯನ್ನಿಡುವವರಿಗೆ ಮಾತ್ರವೇ ಯೇಸು ಕ್ರಿಸ್ತನು ಅಮೂಲ್ಯನಾಗಿದ್ದಾನೆ. ಅವರು ಮಾತ್ರವೇ ಆತನ ಮೌಲ್ಯವನ್ನು ತಿಳಿಯುತ್ತಾರೆ. ಅವರು ಮಾತ್ರವೇ ಆತನನ್ನು ಪ್ರೀತಿಸುತ್ತಾರೆ.

"*ಮುಖ್ಯವಾದ ಮೂಲೆಗಲ್ಲು*"– ಕೀರ್ತನೆ 118:22; ಮತ್ತಾಯ 21:42; ಅಪೊ 4:11. **8**

**2:8** ಯೆಶಾಯ 8:14; ರೋಮಾ 9:33. ದೇವರ ಸತ್ಯಕ್ಕೆ ವಿಧೇಯರಾಗಲು ಬಯಸದೆ ಇರುವವರು ಸತ್ಯಕ್ಕೆ ಎಡವುತ್ತಾರೆ. ಯೇಸು ಕ್ರಿಸ್ತನೇ ಆ ಸತ್ಯವಾಗಿದ್ದಾನೆ (ಲೂಕ 2:34). ಆತನ ಬಯಸುವವರು ಎದ್ದೇಳುವರು; ಬಯಸದೆ ಇರುವವರು ಬಿದ್ದುಹೋಗುವರು.

"*ಅದಕ್ಕಾಗಿಯೇ ನೇಮಕವಾಗಿದ್ದಾರೆ*"– ಪೇತ್ರನು ಬಹುಶಃ ಯೆಹೂದ್ಯರು ಯೇಸು ಕ್ರಿಸ್ತನನ್ನು ನಿರಾಕರಿಸಿದ್ದನ್ನು ಹೇಳುತ್ತಾ ಇದ್ದಾನೆ. ಕರ್ತನಾದ ಯೇಸು ಕ್ರಿಸ್ತನು ಮತ್ತು ಅಪೊಸ್ತಲನಾದ ಪೌಲನು ಇದನ್ನು ಕಲಿಸಲು ಕೀರ್ತನೆ ಮತ್ತು ಯೆಶಾಯ ಪುಸ್ತಕದ ವಚನಗಳನ್ನು ಉಪಯೋಗಿಸಿದ್ದಾರೆ. ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ರೋಮಾ 9-11 ಅಧ್ಯಾಯಗಳ ನೋಟ್ಸ್ ಮತ್ತು ವಿಶೇಷವಾಗಿ ರೋಮಾ 9:14-24,30-33; 11:7-12,22-32 ನೋಡಿರಿ. **9**

**2:9** "*ಆದುಕೊಂಡವರು*"– ಎಫೆ 1:4,11; ಯೋಹಾನ 15:16.

"*ರಾಜವಂಶಸ್ಥರಾದ ಯಾಜಕರು*"– ವ 5. ಈ ಪದಗಳು ರಾಜನಿಗೆ ಮತ್ತು ರಾಜನ ಸೇವೆಯಲ್ಲಿರುವವನಿಗೆ ಅಥವಾ ರಾಜ್ಯವನ್ನು ಸ್ಥಾಪಿಸುವ ಯಾಜಕತ್ವ (ಪ್ರಕ 5:10) ಅಥವಾ ಯಾಜಕರೆಲ್ಲರೂ ರಾಜರಾಗಿದ್ದಾರೆಂದು ಸೂಚಿಸುವ ಯಾಜಕತ್ವವಾಗಿದೆ.

"*ಮೀಸಲಾದ ಜನಾಂಗ*"– ಭೂಮಿಯ ಮೇಲಿರುವ ಇತರೆ ಎಲ್ಲಾ ಜನಗಳಿಂದ ಬೇರ್ಪಡಿಸಲ್ಪಟ್ಟಿರುವ ಮತ್ತು ದೇವರಿಗಾಗಿ ಪ್ರತಿಷ್ಠೆಗೊಂಡಿರುವ ಜನಾಂಗ. ವಿಮೋ 19:5-6; ಯೋಹಾನ 17:6 ರೊಂದಿಗೆ ಹೋಲಿಸಿ ನೋಡಿರಿ. ಪೇತ್ರನು ಸಭೆಯನ್ನು "ಹೊಸ ಇಸ್ರಾಯೇಲ್" ಅಥವಾ "ಆತ್ಮೀಕ ಇಸ್ರಾಯೇಲ್" ಎಂದು ಕರೆದಿಲ್ಲ. ಅವನು ಯೆಹೂದ್ಯ

ವಿಶ್ವಾಸಿಗಳಿಗೆ ಬರೆದಿದ್ದಾನೆ. ಯೇಸು ಕ್ರಿಸ್ತನನ್ನು ನಿರಾಕರಿಸಿದವರು, ಅವರು ಇಸ್ರಾಯೇಲ್ ಜನಾಂಗವಲ್ಲ ಆದರೂ ಅವರು ಇಸ್ರಾಯೇಲಿನ ನಿಜವಾದ ಗುಂಪಾಗಿದ್ದಾರೆ. ದೇವರು ಹಳೆಯ ಇಸ್ರಾಯೇಲ್ ಜನಾಂಗದೊಂದಿಗೆ ತನ್ನ ಕಾರ್ಯವನ್ನು ಮುಗಿಸಿದ್ದಾನೆ ಎಂದು ಪೇತ್ರನು ಹೇಳುತ್ತಾ ಇಲ್ಲ (ಅಪೊ 1:6-7 ರೊಂದಿಗೆ ಹೋಲಿಸಿ ನೋಡಿರಿ). ಹೊಸ ಒಡಂಬಡಿಕೆಯ ಯಾವ ಗ್ರಂಥಕರ್ತನೂ ಸಭೆಯನ್ನು ಹೊಸ ಇಸ್ರಾಯೇಲ್ ಎಂದು ಕರೆದಿಲ್ಲ, ಅವರು ಕರೆದಿಲ್ಲವಾದ್ದರಿಂದ ನಾವೂ ಕರೆಯಬಾರದು. ಅನ್ಯರಾಗಿದ್ದ ವಿಶ್ವಾಸಿಗಳು ಇಸ್ರಾಯೇಲ್ ಗುಂಪಿಗೆ ಸೇರಿದವರಾಗಿದ್ದಾರೆ. ರೋಮಾ 11; ಎಫೆ 2:11-19 ನೋಡಿರಿ.

*"ದೇವರ ಪ್ರಜೆ"*– ಇಲ್ಲಿ ಉಪಯೋಗಿಸಲಾಗಿರುವ ಗ್ರೀಕ್ ಪದವು ಹಲವಾರು ಅರ್ಥಗಳನ್ನು ಕೊಡುತ್ತದೆ – "ಸುರಕ್ಷಿತರಾಗಿರುವದು" ಅಥವಾ "ಸಂಪಾದಿಸಿಕೊಳ್ಳುವದು" ಅಥವಾ "ಹೊಂದುವದು" (ಆದರೆ ಈಗ ನಾವು ಕೊಡುವ ಅರ್ಥಕ್ಕಿಂತ "ವಿಶಿಷ್ಟವಲ್ಲ" – ಕೆಜೆವಿ).

*"ಗುಣಾತಿಶಯಗಳು"*– ಗ್ರೀಕ್ ಪದದ ಅರ್ಥ ಗುಣಲಕ್ಷಣ, ಒಳ್ಳೇತನ, ಶ್ರೇಷ್ಠತೆ, ಅಂದರೆ ಹೊಗಳಿಕೆಗೆ ಅರ್ಹವಾದ ಕಾರ್ಯಗಳು. ಫಿಲಿಪ್ಪಿ 4:8; ಮತ್ತು 2 ಪೇತ್ರ 1:3,5 ನೋಡಿರಿ, ಅವುಗಳಲ್ಲಿಯೂ ಇದೇ ಗ್ರೀಕ್ ಪದವನ್ನು ಉಪಯೋಗಿಸಲಾಗಿದೆ. ಯೆಹೂದ್ಯ ಕ್ರೈಸ್ತರಾಗಿರಲಿ ಅಥವಾ ಅನ್ಯರಾಗಿರಲಿ, ಒಬ್ಬನೇ ನಿಜ ದೇವರ ಶ್ರೇಷ್ಠತೆ ಮತ್ತು ಒಳ್ಳೇತನವನ್ನು ಪ್ರಕಟಿಸುವದು ಈಗ ಎಲ್ಲಾ ವಿಶ್ವಾಸಿಗಳ ಜವಾಬ್ದಾರಿಕೆ ಹಾಗೂ ಕರ್ತವ್ಯವಾಗಿದೆ. ನಾವು ನಮ್ಮ ಮಹಿಮೆಯನ್ನಲ್ಲ ಆತನ ಮಹಿಮೆಯನ್ನು ಎದುರುನೋಡುವವರಾಗಿರಬೇಕು. ನಾವು ನಮ್ಮ ಒಳ್ಳೇತನವನ್ನಲ್ಲ ಬದಲಾಗಿ ಆತನ ಒಳ್ಳೇತನವನ್ನು ಪ್ರಕಟಿಸುವವರಾಗಿರಬೇಕು (ಕೀರ್ತನೆ 40:10; 71:16; ಯೆಶಾಯ 42:12; 43:7; ಎಫೆ 1:6,12,14).

*"ತನ್ನ . . . ಬೆಳಕು"*– ಅಪೊ 26:18; 2 ಕೊರಿಂಥ 4:6; ಎಫೆ 5:8; ಕೊಲೊ 1:13; 1 ಯೋಹಾನ 1:5-7. **10**

**2:10** ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮೊದಲು ವ್ಯಕ್ತಿಗತವಾಗಿ ಯೆಹೂದ್ಯರು ಮತ್ತು ಅನ್ಯರು ದೇವರ ಆತ್ಮೀಕ ಜನರಾಗಿರಲಿಲ್ಲ ಎಂಬದು ಸತ್ಯವಾಗಿದೆ – ಹೋಶೇಯ 1:9-10; 2:23; ರೋಮಾ 9:24-26; ಎಫೆ 2:11-12. ಜನರನ್ನು ಕತ್ತಲೆಯಿಂದ ಬೆಳಕಿಗೆ ಕರೆಯುವ ಮೂಲಕ ದೇವರು ಶುದ್ಧವಾದ ಕರುಣೆಯನ್ನು ತೋರ್ಪಡಿಸಿದ್ದಾನೆ (ತೀತ 3:5). **11**

**2:11** *"ಪ್ರವಾಸಿಗಳು"*– 1:17 – ಈಗ ತಮ್ಮ ನಿಜವಾದ ಮನೆಯಿಂದ ಅಂದರೆ ಪರಲೋಕದಿಂದ ದೂರ ಜೀವಿಸುತ್ತಾ ಇರುವವರು.

*"ಶಾರೀರಿಕ ಅಭಿಲಾಷೆಗಳು"*– 1:14. ಇವೆಲ್ಲವೂ ಈ ಲೋಕದವುಗಳಾಗಿದ್ದು, ಮಾನವನಲ್ಲಿರುವ ಪಾಪದ ಸ್ವಭಾವಗಳಾಗಿವೆ. ವಿಶ್ವಾಸಿಗಳು ಪರಲೋಕಕ್ಕೆ ಸೇರಿದವರಾಗಿದ್ದಾರೆ.

“*ಯುದ್ಧ*”– ವಿಶ್ವಾಸಿಗಳಿಗೆ ವಿರುದ್ಧವಾಗಿ ನಡೆಯುತ್ತಿರುವ ಈ ಹೋರಾಟದಲ್ಲಿ ಕೆಟ್ಟ ಕಾರ್ಯಗಳ ಬಯಕೆ ಸೈತಾನನು ಉಪಯೋಗಿಸುವ ಸಾಧನಗಳಲ್ಲಿ ಒಂದಾಗಿದೆ (ಎಫೆ 6:11-12). ಕೆಟ್ಟ ಬಯಕೆಗಳು ನಮ್ಮ ಆತ್ಮೀಕ ಜೀವಿತವನ್ನು ಹಾಳುಮಾಡಿ ಗಾಯಮಾಡುವಂಥ ಕತ್ತಿಗಳಾಗಿವೆ, ನಮ್ಮನ್ನು ದೇವರು ಹಾಗೂ ಪರಿಶುದ್ಧತೆಯ ಆಲೋಚನೆಗಳಿಂದ ದೂರಮಾಡುವಂಥ ಅಗ್ನಿಬಾಣಗಳಾಗಿವೆ. ಗುಂಡುಗಳು ದೇಹಕ್ಕೆ ಅಪಾಯಕಾರಿಯಾಗಿರುವ ಹಾಗೆಯೇ ಅವುಗಳು ನಮ್ಮ ಆತ್ಮಗಳಿಗೆ ಅಪಾಯಕಾರಿಯಾಗಿವೆ ಯಾಕಂದರೆ ಅವು ನಮಗೆ ಗಾಯಗಳನ್ನು ಮಾಡುತ್ತವೆ ಹಾಗೂ ಹೆಚ್ಚು ವೇದನೆ ಮತ್ತು ಶ್ರಮೆಗಳನ್ನುಂಟು ಮಾಡುತ್ತವೆ. ನಾವು ಅವುಗಳಿಗೆ ಒಳಗಾಗ ಬಾರದು ಅಥವಾ ನಮ್ಮ ಹೃದಯದಲ್ಲಿ ಅವುಗಳಿಗೆ ಅವಕಾಶ ಕೊಡಬಾರದು. “ದೂರವಾಗಿರಬೇಕು” ಎಂಬ ಆಜ್ಞೆ, ದೇವರ ಕೃಪೆಯ ಮೂಲಕ ನಾವು ದೂರವಿರಬಹುದು ಎಂಬದನ್ನು ಸೂಚಿಸುತ್ತದೆ. ಕೆಟ್ಟ ಬಯಕೆಗಳಿಂದ ಸಂಪೂರ್ಣವಾಗಿ ದೂರವಿರಬೇಕು ಎಂಬದೇ ನಮ್ಮ ಗುರಿಯಾಗಿರಬೇಕು. ಒಂದುವೇಳೆ ನಮ್ಮ ಮನಸ್ಸುಗಳಲ್ಲಿ ನೆಲೆಸಲು ಕೆಟ್ಟ ಬಯಕೆಗಳಿಗೆ ಅನುಮತಿಸುವದಾದರೆ, ಅವು ತಮ್ಮ ಸಾಮರ್ಥ್ಯವನ್ನು ತೋರ್ಪಡಿಸುತ್ತವೆ ಮತ್ತು ಅವುಗಳನ್ನು ಸೇರಿಸಿಕೊಳ್ಳುವದೇನೋ ಸುಲಭ ಆದರೆ ತೆಗೆದುಹಾಕುವದು ಬಹಳ ಕಷ್ಟ ಎಂದು ನಮಗೆ ದೃಢವಾಗಿ ಮನವರಿಕೆಯಾಗುತ್ತದೆ. ಕೆಟ್ಟ ಆಲೋಚನೆಗಳಿಂದ ದೂರವಿರುವದು ಜ್ಞಾನದ ಮಾರ್ಗವಾಗಿದೆ, ದೇವರು ನಮಗೆ ಕಲಿಸುವ ಮಾರ್ಗವಾಗಿದೆ. ಮತ್ತು ಅದು ವಿಶ್ವಾಸಿಯ ಆಯ್ಕೆ ಮತ್ತು ಚಿತ್ತವನ್ನು ಒಳಗೊಂಡಿರುತ್ತದೆ – ನಮ್ಮ ಮನಸ್ಸುಗಳಲ್ಲಿ ಅವುಗಳಿಗೆ ಅವಕಾಶ ಕೊಡದಿರುವ ಆಯ್ಕೆಯನ್ನು ನಾವು ಮಾಡಿಕೊಳ್ಳಬೇಕು. **12**

**- 2:12** ಮತ್ತಾಯ 5:16 ನೋಡಿರಿ.

“*ಯೋಗ್ಯವಾಗಿರಲಿ*”– ಗ್ರೀಕ್ ಪದದ ಅರ್ಥಗಳು “ಸುಂದರವಾಗಿರಲಿ”, “ಮೆಚ್ಚಿಕೆಯಾಗಿರಲಿ”, “ಹೊಗಳಿಕೆಗೆ ಅರ್ಹವಾಗಿರಲಿ”, “ಮಾನ್ಯವಾಗಿರಲಿ”, “ಆಕರ್ಷಕವಾಗಿರಲಿ”, “ಉತ್ತಮವಾಗಿರಲಿ” ಎಂದಾಗಿದೆ.

“*ನಿಮಗೆ ವಿರುದ್ಧವಾಗಿ ಮಾತನಾಡುವವರು*”– ಯೇಸು ಕ್ರಿಸ್ತನನ್ನು ತಿರಸ್ಕರಿಸುವವರು ವಿಶ್ವಾಸಿಗಳನ್ನು ನಿಂದಿಸಲು ಬಯಸುತ್ತಾರೆ, ಅವರಲ್ಲಿ ಯಾವಾಗಲೂ ತಪ್ಪು ಹುಡುಕಲು ಪ್ರಯತ್ನಿಸುತ್ತಾರೆ ಮತ್ತು ಹೊಸ ಆರೋಪಗಳನ್ನು ಹುಡುಕುತ್ತಾರೆ. ಇತರರು ನಮ್ಮನ್ನು ದೂಷಿಸುವಾಗ ನಾವು ಉತ್ತಮವಾಗಿ ಕಾರ್ಯನಿರ್ವಹಿಸಬೇಕು ಎಂಬದಕ್ಕೆ ಅದುವೇ ಪ್ರೇರಣೆಯಾಗಿರಬೇಕು. ಆ ಕೇಡು ನಮಗೆ ಅನುಕೂಲಕರವಾಗಿ ಕಾರ್ಯಮಾಡುತ್ತದೆ.

“*ರಕ್ಷಣೆಯ ದಿನದಲ್ಲಿ*”– ಇದು ಆಶೀರ್ವಾದ ಅಥವಾ ದೇವರ ನ್ಯಾಯವಿಚಾರಣೆಯ ವಿಶೇಷವಾದ ಸಮಯವನ್ನು ಸೂಚಿಸುತ್ತದೆ. **13-14**

**- 2:13-14** ರೋಮಾ 13:1-5. **15**

**2:15** *"ಒಳ್ಳೆಯದನ್ನು ಮಾಡುವದು"*– ವಾದಗಳಿಂದ ಸಾಧಿಸಲು ಆಗದೆ ಇರುವದನ್ನು ಒಳ್ಳೆಯ ಕಾರ್ಯಗಳಿಂದ ಸಾಧಿಸಲು ಸಾಧ್ಯವಾಗುತ್ತದೆ. ಯೇಸು ಕ್ರಿಸ್ತನ ಸುವಾರ್ತೆಯ ಅತ್ಯುತ್ತಮವಾದ ವಾದಗಳಲ್ಲಿ ಒಂದು ಯಾವುದೆಂದರೆ ಅದನ್ನು ನಂಬುವವರ ಬದಲಾದ ಮತ್ತು ಪರಿಶುದ್ಧವಾದ ಜೀವಿತವಾಗಿದೆ.

*"ತಿಳಿಯದೆ"*– 1:14; 2 ಪೇತ್ರ 3:16. ಅವರು ತಿಳಿಯದೆ ಯೇಸು ಕ್ರಿಸ್ತನು, ಆತನ ಸುವಾರ್ತೆ ಮತ್ತು ಜನರ ಬಗ್ಗೆ ಮಾತನಾಡುತ್ತಾರೆ ಯಾಕಂದರೆ ಅವರಿಗೆ ನಿಜವಾದ ದೇವರು ಯಾರು ಎಂಬದು ಗೊತ್ತಿಲ್ಲ (ಯೋಹಾನ 15:21; ಎಫೆ 4:17-18).

*"ಮೂಢಜನರು"*– ರೋಮಾ 1:21-22. **16**

**- 2:16** ಗಲಾ 5:13; ಮತ್ತು ರೋಮಾ 6:15-18 ನೋಡಿರಿ. **17**

**2:17** *"ಎಲ್ಲರನ್ನೂ"*– ಬಡವರು ಅಥವಾ ಐಶ್ವರ್ಯವಂತರು, ಪ್ರಸಿದ್ಧರು ಅಥವಾ ಸಾಮಾನ್ಯರು, ವಿದ್ಯಾವಂತರು ಅಥವಾ ಅವಿದ್ಯಾವಂತರು. ಧಾರ್ಮಿಕ ಗರ್ವ, ಧರ್ಮಾಂದತೆ ಮತ್ತು ಉನ್ನತರು ಎಂಬ ಭಾವನೆಗಳನ್ನು ಖಂಡಿಸಬೇಕು. ವಿಶ್ವಾಸಿಗಳು ಯಾರನ್ನೂ ಕಡೆಗಣಿಸಬಾರದು ಅಥವಾ ಅಲ್ಪರು ಎಂದು ಎಣಿಸಬಾರದು. ರೋಮಾ 12:10; ಯಾಕೋಬ 2:1-4,9; 1 ಕೊರಿಂಥ 12:14-26; ಅಪೊ 6:1 ರೊಂದಿಗೆ ಹೋಲಿಸಿ ನೋಡಿರಿ.

*"ದೇವರಿಗೆ ಭಯಪಡಿರಿ"*– 1:17 ರಲ್ಲಿ ವಚನಗಳನ್ನು ನೋಡಿರಿ. ಇದು ದೇವರನ್ನು ಪ್ರೀತಿಸಬೇಕು ಎಂಬ ಆಜ್ಞೆಯಂತೆಯೇ ದೃಢಯತೆಯುಳ್ಳ ಆಜ್ಞೆಯಾಗಿದ್ದು ವಿಶ್ವಾಸಿಗಳಿಗೆ ಕೊಡಲಾಗಿದೆ. ನಿಜವಾಗಿ ಹೇಳುವದಾದರೆ, ಭಕ್ತಿಯುಳ್ಳ ಭಯ, ಗೌರವ ಮತ್ತು ದೇವರ ಪ್ರಭಾವ, ದೇವರ ಪ್ರೀತಿಯೊಂದಿಗೆ ಜೊತೆಜೊತೆಯಾಗಿ ಸಾಗುತ್ತದೆ ಮತ್ತು ಇವುಗಳನ್ನು ಬೇರ್ಪಡಿಸಲು ಆಗುವದಿಲ್ಲ. ಒಂದುವೇಳೆ ಈ ವಿಷಯದಲ್ಲಿ ನಾವು ಕೊರತೆಯುಳ್ಳವರಾಗಿದ್ದರೆ, ಕೀರ್ತನೆ 86:11 ರಲ್ಲಿ ದಾವೀದನು ಪ್ರಾರ್ಥನೆ ಮಾಡಿದಂತೆ ನಾವು ಪ್ರಾರ್ಥನೆ ಮಾಡಬೇಕು.

*"ಅರಸನನ್ನು ಸನ್ಮಾನಿಸಿರಿ"*– ರೋಮಾ 13:1-7 ರೊಂದಿಗೆ ಹೋಲಿಸಿ ನೋಡಿರಿ. **18**

**2:18** *"ಸೇವಕರೇ"*– ಎಫೆ 6:5-8; ಕೊಲೊ 3:22-24. **19**

**2:19** *"ಶ್ಲಾಘ್ಯ"*– ದೇವರೇ ಅಂಥವರನ್ನು ಹೊಗಳುತ್ತಾನೆ ಮತ್ತು ಸನ್ಮಾನಿಸುತ್ತಾನೆ. **20**

**2:20** 4:15-16 ರೊಂದಿಗೆ ಹೋಲಿಸಿ ನೋಡಿರಿ.

*"ತಾಳ್ಮೆಯಿಂದಿರುವದು"*– ಕೋಪ ಮಾಡಿಕೊಳ್ಳದೆ ಇರುವದು, ಸೇಡು ತೀರಿಸಿಕೊಳ್ಳಬೇಕೆಂದು ಬಯಸದೆ ಇರುವದು. **21**

**2:21** *"ಕರೆಯಲ್ಪಟ್ಟಿರಿ"*– ದೇವರು ನಮ್ಮನ್ನು ತನ್ನ ವಿಶೇಷ ಜನರಾಗಿರಲು ಕರೆದಾಗ, ಒಳ್ಳೆಯ ಕಾರ್ಯಗಳಿಗಾಗಿ ಭಾಧೆಪಡುವದು ಆ ಕರೆಯಲ್ಪಡುವಿಕೆಯ ಭಾಗವಾಗಿದೆ. ಒಳ್ಳೆಯ ಕಾರ್ಯಗಳನ್ನು ಮಾಡಿ ಭಾಧೆ ಅನುಭವಿಸಿದ ವಿಷಯದಲ್ಲಿ ಯೇಸು ಕ್ರಿಸ್ತನು ಉತ್ತಮವಾದ

ಮಾದರಿಯಾಗಿದ್ದಾನೆ. ಆತನು ಒಳ್ಳೆಯದನ್ನು ಬಿಟ್ಟರೆ ಬೇರೆ ಏನನ್ನೂ ಮಾಡಲಿಲ್ಲ, ಆದರೂ ನಮ್ಮೆಲ್ಲರಿಗಿಂತ ಬಹಳವಾಗಿ ಶ್ರಮೆಗಳನ್ನು ಅನುಭವಿಸಿದನು.

*"ಮಾದರಿ, ಅನುಸರಣೆ"*– ಮತ್ತಾಯ 4:19; 8:22; 16:24; 19:21; ಲೂಕ 9:23; ಯೋಹಾನ 1:43; 10:4,27; 12:26; ರೋಮಾ 15:5; 1 ಕೊರಿಂಥ 11:1. ನಾವು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟಿದ್ದೇವೆ ಎಂದು ಯೋಚಿಸುವವರು ಆತನ ಮಾದರಿಯನ್ನು ಅನುಸರಣೆ ಮಾಡದೆ ಇದ್ದರೆ ಅವರು ತಮ್ಮನ್ನು ಮೋಸ ಮಾಡಿಕೊಳ್ಳುವವರಾಗಿದ್ದಾರೆ. **22**

- **2:22** ಯೆಶಾಯ 53:9; ಮತ್ತಾಯ 27:23; ಯೋಹಾನ 8:46; 19:4; 2 ಕೊರಿಂಥ 5:21; ಇಬ್ರಿ 4:15; 7:26. **23**

**2:23** ಯೆಶಾಯ 53:7; ಮತ್ತಾಯ 26:63; 27:12-14; ಲೂಕ 23:8-9. ನಾವೂ ಇದೇ ರೀತಿ ನಡೆದುಕೊಳ್ಳಬೇಕು. "ನೀತಿಯಿಂದ ನ್ಯಾಯತೀರ್ಪು ಕೊಡುವವನು" ದೇವರು ಮಾತ್ರವೇ ಆಗಿದ್ದಾನೆ. **24**

**2:24** ನಮಗೆ ಬದಲಾಗಿ ನಮ್ಮ ಸ್ಥಳದಲ್ಲಿ ಯೇಸು ಕ್ರಿಸ್ತನು ಶ್ರಮೆಗಳನ್ನು ಅನುಭವಿಸಿದನು ಎಂಬ ಸ್ಪಷ್ಟವಾದ ಹೇಳಿಕೆಯನ್ನು ಸತ್ಯವೇದದ ಈ ವಚನದಲ್ಲಿ ನಾವು ನೋಡಬಹುದು. ಹಾಗೆಯೇ 3:18; ಯೆಶಾಯ 53:5; ಮತ್ತಾಯ 20:28; ಯೋಹಾನ 1:29; 10:11,14; ರೋಮಾ 3:25; 2 ಕೊರಿಂಥ 5:14,21; ಇಬ್ರಿ 9:28 ನೋಡಿರಿ. ಯೇಸು ಕ್ರಿಸ್ತನ ಶ್ರಮೆಗಳು ಮತ್ತು ಮರಣದ ಉದ್ದೇಶವನ್ನು ಇಲ್ಲಿ ನೋಡಿರಿ. ರೋಮಾ 14:9; 2 ಕೊರಿಂಥ 5:15 ರೊಂದಿಗೆ ಹೋಲಿಸಿ ನೋಡಿರಿ.

*"ಪಾಪದ ಪಾಲಿಗೆ ಸಾಯುವದು"*– ರೋಮಾ 6:10-14; ಗಲಾ 2:20; 5:24; ಕೊಲೊ 3:5.

*"ನೀತಿವಂತರಾಗಿ ಜೀವಿಸುವದು"*– ರೋಮಾ 6:18-19; 14:19,21; 2 ಕೊರಿಂಥ 5:21; ಎಫೆ 4:24; ಫಿಲಿಪ್ಪಿ 1:11; 1 ತಿಮೊ 6:11.

*"ಗುಣವಾಯಿತು"*– ಯೆಶಾಯ 53:5. ಪಾಪಗಳು ನಮ್ಮದು, ಆದರೆ ನಮ್ಮನ್ನು ಗುಣಪಡಿಸಲು ಆತನು ಶಿಕ್ಷೆಯನ್ನು ಅನುಭವಿಸಿದನು. **25**

**2:25** *"ದಾರಿತಪ್ಪುವದು"*– ಯೆಶಾಯ 53:6.

*"ಕುರುಬನು"*– 5:4; ಯೋಹಾನ 10:1-18.

*"ಅಧ್ಯಕ್ಷನು"*– ಅಪೊ 20:28; ಫಿಲಿಪ್ಪಿ 1:1; ತೀತ 1:7 ರಲ್ಲಿ ಸಭೆಯ ಹಿರಿಯರಿಗೆ ಇದೇ ಪದವನ್ನು ಉಪಯೋಗಿಸಲಾಗಿದೆ. ಯೇಸು ಕ್ರಿಸ್ತನು ಹಿರೀ ಕುರುಬನಾಗಿರುವಂತೆಯೇ ಪ್ರಧಾನ ಅಧ್ಯಕ್ಷನೂ ಆಗಿದ್ದಾನೆ, ಈ ಎರಡೂ ಗುಣಗಳು ಆತನಲ್ಲಿ ಮಾತ್ರವೇ ಇವೆ.

**3**1

**3:1** *"ಅಧೀನರಾಗಿರಿ"*– ಎಫೆ 5:22-24.

*"ದೇವರ ವಾಕ್ಯ"*– ದೇವರ ವಾಕ್ಯ, ವಿಶೇಷವಾಗಿ ಸುವಾರ್ತೆ.

*"ಸನ್ಮಾರ್ಗ"*– ಕ್ರಿಸ್ತನ ಸನ್ಮಾರ್ಗ. 1 ಕೊರಿಂಥ 7:16 ರೊಂದಿಗೆ ಹೋಲಿಸಿ ನೋಡಿರಿ. **2**

**3:2** *"ನಿರ್ಮಲತೆ . . . ಮತ್ತು ಭಯಭಕ್ತಿ"*– ಎಲ್ಲಾ ರೀತಿಯ ಮಾತುಕತೆಗಳು, ಎಲ್ಲಾ ರೀತಿಯ ವಾದಗಳು ವಿಫಲವಾದರೂ ಇವು ಅಪನಂಬಿಕೆಯುಳ್ಳ ಗಂಡಂದಿರನ್ನು ಯೇಸು ಕ್ರಿಸ್ತನ ಕಡೆಗೆ ನಡೆಸುತ್ತವೆ. ನಿಜವಾಗಿ ಹೇಳುವಾದರೆ ಒಂದುವೇಳೆ ಹೆಂಡತಿಯರು ತಮ್ಮ ಗಂಡಂದಿರಿಗೆ ಬೋಧಿಸಲು ಪ್ರಯತ್ನಿಸಿದರೆ ಅವರು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವ ಬದಲು ಆತನಿಂದ ಹೆಚ್ಚಾಗಿ ದೂರ ಹೋಗುತ್ತಾರೆ. **3-4**

**3:3-4** ಯೆಶಾಯ 3:16-23; 1 ತಿಮೊ 2:9-10 ರೊಂದಿಗೆ ಹೋಲಿಸಿ ನೋಡಿರಿ. ಸ್ತ್ರೀಯರು ಜಡೆಹೆಣೆದುಕೊಳ್ಳುವದಿಂದ ತಮ್ಮ ಗಂಡಂದಿರನ್ನು ಕ್ರಿಸ್ತನ ಕಡೆಗೆ ನಡೆಸಲು ಆಗುವದಿಲ್ಲ ಆದರೆ ತಮ್ಮ ಹೃದಯವನ್ನು ಸರಿಪಡಿಸಿಕೊಂಡರೆ ಸಾಧ್ಯವಾಗುತ್ತದೆ; ಬಂಗಾರದಿಂದ ಆಗುವದಿಲ್ಲ ಆದರೆ ದೈವೀಕತೆಯಿಂದ ಸಾಧ್ಯವಾಗುತ್ತದೆ; ಹೊರಗೆ ಕಾಣಿಸುವ ವಸ್ತ್ರಗಳಿಂದ ಆಗುವದಿಲ್ಲ ಆದರೆ ಆಂತರ್ಯ ಕೃಪೆಯಿಂದ ಸಾಧ್ಯವಾಗುತ್ತದೆ. ಆಂತರ್ಯದಲ್ಲಿರುವ ಆತ್ಮೀಕ ಸೌಂದರ್ಯವು ಬಾಹ್ಯದ ಸೌಂದರ್ಯಕ್ಕಿಂತಲೂ ಹೆಚ್ಚು ಉತ್ತಮವಾದದ್ದಾಗಿದೆ. ಮತ್ತು ಆಂತರ್ಯದ ಸೌಂದರ್ಯವು ಎಂದಿಗೂ ಕಳೆಗುಂದುವದಿಲ್ಲ. ಜ್ಞಾನೋ 31:10-31 ರೊಂದಿಗೆ ಹೋಲಿಸಿ ನೋಡಿರಿ. ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಆಂತರ್ಯದ ಸೌಂದರ್ಯವನ್ನು ಬಯಸುವವರಾಗಿ ಅದರಲ್ಲಿ ಆಸಕ್ತರಾಗಿ ನಡೆದುಕೊಂಡಿದ್ದರೆ ಸಭೆಗಳು ಮತ್ತು ಲೋಕವು ಅತ್ಯುತ್ತಮ ಸ್ಥಳಗಳಾಗಿರುತ್ತಾ ಇದ್ದವು. **5-6**

**3:5-6** ಪರಿಶುದ್ಧತೆ, ದೇವರ ಮೇಲಿನ ನಿರೀಕ್ಷೆ ಮತ್ತು ಅಧೀನರಾಗುವ ಮನಸ್ಸು ದೇವರು ರಕ್ಷಣೆಯ ಮಾರ್ಗದಲ್ಲಿರುವ ಸ್ತ್ರೀಯರಲ್ಲಿ ನೋಡ ಬಯಸುವ ಸೌಂದರ್ಯದ ಗುರುತುಗಳಾಗಿವೆ. **6**

**3:6** *"ಸಾರಳು"*– ಆದಿ 18:12.

*"ಕುಮಾರ್ತೆಯರು"*– ಅಬ್ರಹಾಮನು ವಿಶ್ವಾಸಿಗಳೆಲ್ಲರಿಗೆ ತಂದೆಯಾಗಿದ್ದಾನೆ (ರೋಮಾ 4:16). ತಮ್ಮ ಗಂಡಂದಿರಿಗೆ ಅಧೀನರಾಗಿ ನಡೆದುಕೊಳ್ಳುವ ರಕ್ಷಣೆಯ ಮಾರ್ಗದಲ್ಲಿರುವ ಸ್ತ್ರೀಯರೆಲ್ಲರಿಗೆ ಸಾರಳು "ತಾಯಿಯಾಗಿದ್ದಾಳೆ". **7**

**3:7** ಎಫೆ 5:25,28; ಕೊಲೊ 3:19. ಆತನು ಕ್ರೈಸ್ತರಾಗಿರುವ ಗಂಡಂದಿರಿಗೆ ಮಾತನಾಡುತ್ತಾ ಇದ್ದಾನೆ.

*"ವಿವೇಕ"*– ಗಂಡಂದಿರು ತಮ್ಮ ಹೆಂಡತಿಯರ ಸಮಸ್ಯೆಗಳು, ಬಯಕೆಗಳು ಮತ್ತು ಬಲಹೀನತೆಗಳನ್ನು ಅರ್ಥಮಾಡಿಕೊಳ್ಳಬೇಕು ಹಾಗೂ ಅವುಗಳಿಗೆ ಆದ್ಯತೆಯನ್ನು ಕೊಡದೆ ಅವರನ್ನು ಗೌರವಿಸಬೇಕು.

“*ಬಲಹೀನ*”– ಸ್ತ್ರೀಯರು ಶಾರೀರಿಕವಾಗಿ ಬಲಹೀನರೇ ಹೊರತು ಮಾನಸಿಕವಾಗಿ ಬಲಹೀನರಲ್ಲ (ಆದರೂ ಅವರು ತಮ್ಮ ಆಲೋಚನೆ ಮತ್ತು ಭಾವನಾತ್ಮಕ ವಿಷಯಗಳಲ್ಲಿ ಭಿನ್ನರಾಗಿದ್ದಾರೆ). ಅವರ ಸ್ಥಾನವೂ ಬಲಹೀನವಾದದ್ದಾಗಿದೆ – ಅವರೇ ಅಧೀನರಾಗಿ ಮತ್ತು ವಿಧೇಯರಾಗಿ ನಡೆದುಕೊಳ್ಳಬೇಕು.

“*ಪ್ರಾರ್ಥನೆಗಳಿಗೆ ಅಡ್ಡಿಯಾಗುವದಿಲ್ಲ*”– ಒಂದುವೇಳೆ ಮದುವೆಯಾಗಿರುವ ದಂಪತಿಗಳು ತಮ್ಮ ಪ್ರಾರ್ಥನೆಗಳಿಗೆ ಉತ್ತರ ಸಿಗಬೇಕೆಂದು ಬಯಸುವದಾದರೆ, ಅವರು ಒಬ್ಬರೊಂದಿಗೊಬ್ಬರು ಯಾವ ನಡೆದುಕೊಳ್ಳುತ್ತಾರೆ ಎಂಬ ವಿಷಯದಲ್ಲಿ ಎಚ್ಚರಿಕೆಯುಳ್ಳವರಾಗಿರಬೇಕು. ತನ್ನ ಹೆಂಡತಿಯೊಂದಿಗೆ ಕೆಟ್ಟದಾಗಿ ನಡೆದುಕೊಳ್ಳುವ ಗಂಡನ ಪ್ರಾರ್ಥನೆಯನ್ನು ದೇವರು ನಿರಾಕರಿಸುತ್ತಾನೆ ಹಾಗೆಯೇ ತಮ್ಮ ಗಂಡನಿಗೆ ಅಧೀನಳಾಗಲು ನಿರಾಕರಿಸುವ ಹೆಂಡತಿಯಂದಿರು ಮಾಡುವ ಪ್ರಾರ್ಥನೆಯನ್ನು ದೇವರು ನಿರಾಕರಿಸುತ್ತಾನೆ. **8-9**

- **3:8-9** ರೋಮಾ 12:9-17; ಎಫೆ 4:2-3,32; ಫಿಲಿಪ್ಪಿ 2:2-3; ಕೊಲೊ 3:12-14; ಲೂಕ 6:28; ಯೋಹಾನ 13:34; 1 ಥೆಸ 5:15. **9**

**3:9** “*ಆಶೀರ್ವಾದವನ್ನು ಬಾಧ್ಯವಾಗಿ ಹೊಂದುವಿರಿ*”– 1:3-5; ಗಲಾ 3:14; ಎಫೆ 1:3. ದೇವರು ನಮ್ಮ ಮೇಲೆ ಸುರಿಯಮಾಡುವ ಆಶೀರ್ವಾದಗಳ ದೃಷ್ಟಿಕೋನದಲ್ಲಿ ಮತ್ತು ಭವಿಷ್ಯದಲ್ಲಿ ನಮಗೆ ದೊರೆಯುವ ಎಲ್ಲಾ ಆಶೀರ್ವಾದಗಳ ವಿಷಯದಲ್ಲಿ, ನಾವು ದ್ವೇಷ ಸಾಧಿಸುವ ಬದಲು ಇತರರನ್ನು ಆಶೀರ್ವದಿಸಲು ಸಿದ್ಧರಾಗಿರಬೇಕು. **10-12**

**3:10-12** ಕೀರ್ತನೆ 34:12-16. ದೇವರು ನಮಗೆ 8,9 ವಚನಗಳಲ್ಲಿ ಹೇಳಿರುವ ಹಾಗೆ ನಾವು ಜೀವಿಸದೆ ಹೋದರೆ, ಒಳ್ಳೆಯ ದಿನಗಳಿಗೆ ಬದಲಾಗಿ ಕೆಟ್ಟ ದಿನಗಳನ್ನು ನೋಡುವಂತೆ ಮಾಡುತ್ತಾನೆ ಹಾಗೂ ನಮ್ಮ ಪ್ರಾರ್ಥನೆಗಳಿಗೆ ಉತ್ತರ ಕೊಡುವ ಬದಲು ನಮ್ಮ ಪ್ರಾರ್ಥನೆ ಕೇಳಿಸಿಕೊಳ್ಳುವದನ್ನೇ ನಿಲ್ಲಿಸುತ್ತಾನೆ. **13**

**3:13** ರೋಮಾ 13:3. ಅವಿಶ್ವಾಸಿಗಳು ಸಹ ಕರುಣೆಯುಳ್ಳ ಮತ್ತು ದಯೆಯುಳ್ಳ ಸ್ವಭಾವಗಳು, ಶಾಪಗಳಿಗೆ ಬದಲಾಗಿ ಆಶೀರ್ವಾದಗಳು, ಕೆಟ್ಟ ಕಾರ್ಯಗಳಿಗೆ ಬದಲಾಗಿ ಒಳ್ಳೆಯ ಕಾರ್ಯಗಳನ್ನು ಗುರುತಿಸಿಕೊಳ್ಳುತ್ತಾರೆ ಹಾಗೂ ಶ್ಲಾಘಿಸುತ್ತಾರೆ. **14**

**3:14** ಆದರೆ ಒಳ್ಳೆಯ ಕಾರ್ಯಗಳಿಗಾಗಿ ಯಾವಾಗಲು ಶ್ರಮೆಗಳನ್ನು ಅನುಭವಿಸುವದು ಈ ರೀತಿಯ ಲೋಕದಲ್ಲಿ ಸಾಮಾನ್ಯವಾದ ಸಂಗತಿಯಾಗಿದೆ – 2:19-20; 4:12-13. ಒಂದುವೇಳೆ ಹೀಗೇ ಆಗುತ್ತಾ ಇರುವದಾದರೆ ಕರ್ತನಾದ ಯೇಸು ಕ್ರಿಸ್ತನು ಮತ್ತಾಯ 5:10-12 ರಲ್ಲಿ ಹೇಳಿರುವ ಸತ್ಯವನ್ನು ನಾವು ನೆನಪು ಮಾಡಿಕೊಳ್ಳಬೇಕು.

“*ಹೆದರಬೇಡಿರಿ*”– ಯೆಶಾಯ 8:12. ಮತ್ತಾಯ 10:26,28,31; ಯೋಹಾನ 14:27 ರೊಂದಿಗೆ ಹೋಲಿಸಿ ನೋಡಿರಿ. **15**

**3:15** *"ಕರ್ತನನ್ನು ಪ್ರತಿಷ್ಠೆಪಡಿಸಿರಿ"*– ಇಲ್ಲಿ ಪ್ರತಿಷ್ಠೆಪಡಿಸಿರಿ ಎಂಬದಾಗಿ ಹೇಳಿರುವ ಪದವನ್ನು ನೋಡಿರಿ. ಇದರ ಅರ್ಥ ನಾವು ಆರಾಧಿಸಲು, ಘನಪಡಿಸಲು ಮತ್ತು ವಿಧೇಯರಾಗಲು ಕರ್ತನನ್ನು ಎಲ್ಲರಿಂದ ಪ್ರತಿಷ್ಠಿಸಬೇಕು. ನಾವು ಮನಪೂರ್ವಕವಾಗಿ, ಚಿತ್ತಪೂರ್ವಕವಾಗಿ, ಸತತವಾಗಿ ಆತನನ್ನು ನಮ್ಮ ಹೃದಯಗಳ ಕರ್ತನನ್ನಾಗಿ ಮಾಡಿಕೊಳ್ಳಬೇಕು.

*"ಯಾವಾಗಲೂ ಸಿದ್ಧರಾಗಿರಬೇಕು"*– ಎಫೆ 5:15-16. ನಾವು ಯೇಸು ಕ್ರಿಸ್ತನಲ್ಲಿ ಯಾಕೆ ವಿಶ್ವಾಸಿಗಳಾಗಿದ್ದೇವೆ ಮತ್ತು ಪರಲೋಕದಲ್ಲಿ ನಮಗೆ ಯಾಕೆ ನಿರೀಕ್ಷೆಯಿದೆ ಎಂಬದು ನಮಗೆ ಗೊತ್ತಿರಬೇಕು ಹಾಗೂ ನಾವು ಇವುಗಳನ್ನು ಇತರರಿಗೆ ಸ್ಪಷ್ಟವಾಗಿ ಅರ್ಥವಾಗುವ ರೀತಿಯಲ್ಲಿ ಹೇಳಲು ಶಕ್ತರಾಗಿರಬೇಕು. **16**

**3:16** *"ಮನಸ್ಸಾಕ್ಷಿ"*– ಅಪೊ 23:1; 24:16; 2 ಕೊರಿಂಥ 1:12; 1 ತಿಮೊ 1:5,19; 3:9.

*"ನಾಚಿಕೆಪಡುವರು"*– 2:15. **17**

- **3:17** 2:20; 4:15-16 ನೋಡಿರಿ. . **18**

- **3:18** 2:24 ನೋಡಿರಿ.

*"ಬಾಧೆಪಟ್ಟನು"*– 2:21; 4:1.

*"ಒಂದೇ ಸಾರಿ"*– ಯೋಹಾನ 19:30; ಇಬ್ರಿ 9:25-28; 10:10.

*"ನೀತಿವಂತನು"*– ಲೂಕ 23:47; ಅಪೊ 3:14; 7:52; 22:14; 1 ಯೋಹಾನ 2:1.

*"ಅನೀತಿವಂತರು"*– ಸ್ವಾಭಾವಿಕವಾಗಿ ನಾವೆಲ್ಲರೂ ಅನೀತಿವಂತರಾಗಿದ್ದೇವೆ (ರೋಮಾ 1:29-32; 3:9-20,23). ಪಾಪಿಗಳಾಗಿದ್ದ ಮಾನವರಿಗಾಗಿ ಯೇಸು ಕ್ರಿಸ್ತನು ಬಾಧೆ ಅನುಭವಿಸಿದ್ದರ ಉದ್ದೇಶವನ್ನು ನೋಡಿರಿ. ಜನರನ್ನು ದೇವರ ಬಳಿಗೆ ನಡೆಸಲು ಆತನು ಬಾಧೆ ಅನುಭವಿಸಿದನು. ಎಫೆ 2:13,18; ಇಬ್ರಿ 10:19-22; ಯೋಹಾನ 14:6 ರೊಂದಿಗೆ ಹೋಲಿಸಿ ನೋಡಿರಿ.

*"ಸತ್ತನು"*– ಮತ್ತಾಯ 16:21; 27:50,58-60; ಮಾರ್ಕ 15:43-45; ಯೋಹಾನ 19:32-34; 1 ಕೊರಿಂಥ 15:3.

*"ಬದುಕುವವನಾದನು"*– ಮತ್ತಾಯ 28:6; ರೋಮಾ 1:4.

*"ಆತ್ಮ"*– ದೇವರಾತ್ಮ (ಯೋಹಾನ 14:16-17; ಮತ್ತಾಯ 3:16). **19-22**

**3:19-22** ಈ ವಚನಭಾಗವು ಅಸ್ಪಷ್ಟವಾಗಿದೆ ಮತ್ತು ಕಷ್ಟಕರವಾಗಿದೆ. ಯೇಸು ಕ್ರಿಸ್ತನು ತನ್ನ ಮರಣ ಮತ್ತು ಪರಲೋಕಕ್ಕೆ ಆರೋಹಣವಾಗುವ ಸಮಯದ ನಡುವೆ ಎಲ್ಲೋ ಹೋಗಿ ಸೆರೆಮನೆಯಲ್ಲಿದ್ದ ಆತ್ಮಗಳಿಗೆ ಸುವಾರ್ತೆ ಸಾರಿದನು ಎಂಬದಾಗಿ ಅನ್ನಿಸುತ್ತದೆ. ಪೇತ್ರನು "ಆತ್ಮಗಳು" ಅಥವಾ "ಸೆರೆಮನೆ" ಅಥವಾ ಯೇಸು ಕ್ರಿಸ್ತನು ಅಲ್ಲಿಗೆ ಹೋದನು ಎಂಬದಾಗಿ ಹೇಳಿರುವ ಮಾತುಗಳ ಅರ್ಥವನ್ನು ತಿಳಿಸಿಲ್ಲ. ಕೆಲವರು ಹೇಳುವದೇನೆಂದರೆ

ಯೇಸು ಕ್ರಿಸ್ತನ ಆತ್ಮವು ನೋಹನಲ್ಲಿದ್ದು ಆಗಿನ ಕಾಲದವರಿಗೆ ಬೋಧಿಸುತ್ತಾ ಇತ್ತು, ಆದರೆ ಇದು 19 ನೇ ವಚನದ ಪದಗಳನ್ನು ಕಡೆಗಣಿಸುವಂತೆ ಮಾಡುತ್ತದೆ. **19**

**3:19** ಯೇಸು ಕ್ರಿಸ್ತನು ಸತ್ತ ನಂತರ ಎಲ್ಲಿಗೆ ಹೋದನು? "ಅಪೊಸ್ತಲರ ವಿಶ್ವಾಸ ಪ್ರಮಾಣ" ಎಂಬ ನಂಬಿಕೆಯ ಸೂತ್ರದಲ್ಲಿರುವ ಹೇಳಿಕೆಯಲ್ಲಿ ಇರುವ ಕೆಲವು ಸಾಲುಗಳು ಹೇಳುವದೇನೆಂದರೆ: "ಆತನು ನರಕಕ್ಕೆ ಹೋದನು". ಯೇಸು ಕ್ರಿಸ್ತನು ಶಿಕ್ಷೆಯನ್ನು ಅನುಭವಿಸುವ ಸಲುವಾಗಿ ನರಕಕ್ಕೆ ಹೋಗಲಿಲ್ಲ. ಆತನ ಶ್ರಮೆಗಳೆಲ್ಲವೂ ಶಿಲುಬೆಯ ಮೇಲೆಯೂ ಕೊನೆಯಾದವು (ಯೋಹಾನ 19:30). ಆದರೆ ಆತನು ಸಾಯುವವರು ಹೋಗುವ ಕಣ್ಣಿಗೆ ಕಾಣದ ರಂಗವಾಗಿರುವ, ಇಬ್ರಿಯ ಭಾಷೆಯಲ್ಲಿ "ಶಿಯೋಲ್" ಎಂದು ಕರೆಯುವ ಸ್ಥಳಕ್ಕೆ ಹೋದನು (ಎಫೆ 4:9; ಕೀರ್ತನೆ 16:10).

*"ಸಾರಿದನು"*– (ಇವಾಂಜಲಿಜೊ) ಸುವಾರ್ತೆ ಸಾರುವದು ಎಂಬ ಅರ್ಥವನ್ನು ಕೊಡುವ ಗ್ರೀಕ್ ಪದವನ್ನು ಪೇತ್ರನು ಇಲ್ಲಿ ಹೇಳಿಲ್ಲ ಬದಲಾಗಿ ಸುದ್ದಿಯನ್ನು (ಕೆರುಸ್ಸೋ) ಸಾರುವ ಅರ್ಥವನ್ನು ಕೊಡುವ ಪದವನ್ನು ಹೇಳಿದ್ದಾನೆ.

*"ಆತ್ಮಗಳು"*– ಪೇತ್ರನು ಮಾನವರ ಆತ್ಮಗಳು ಎಂದು ಹೇಳಿಲ್ಲ, ಆದ್ದರಿಂದ ಜಲಪ್ರಳಯದಲ್ಲಿ ಪ್ರಾಣ ಕಳೆದುಕೊಂಡವರ ಆತ್ಮಗಳು ಎಂದು ಯೋಚಿಸುವ ಅವಶ್ಯಕತೆಯಿಲ್ಲ. ಸತ್ಯವೇದದಲ್ಲಿ ಆತ್ಮಗಳು ಎಂಬ ಪದ ಕೆಲವೊಮ್ಮೆ ದುರಾತ್ಮಗಳನ್ನು ಅಥವಾ ದೇವದೂತರನ್ನು ಸೂಚಿಸುತ್ತದೆ (ಮತ್ತಾಯ 8:16; ಇಬ್ರಿ 1:14).

*"ಸೆರೆಮನೆ"*– ನಿರ್ಗಮಿಸಿರುವ ಮಾನವರ ಆತ್ಮಗಳು ಸೆರೆಮನೆಯಲ್ಲಿವೆ ಎಂದು ಸತ್ಯವೇದವು ಹೇಳುವದಿಲ್ಲ, ಆದರೆ ಕೆಲವು ದೇವದೂತರು ಸೆರೆಮನೆಯಲ್ಲಿದ್ದಾರೆ ಎಂಬದನ್ನು ಸೂಚಿಸುತ್ತದೆ (2 ಪೇತ್ರ 2:4). ಆದ್ದರಿಂದ ಇಲ್ಲಿ "ಆತ್ಮಗಳು" ಎಂಬದು ಅವಿಧೇಯರಾದ ದೇವದೂತರನ್ನು ಸೂಚಿಸುತ್ತದೆ. **20**

**3:20** *"ಅವಿಧೇಯರು"*– ಇದು ದೇವದೂತರು ಮತ್ತು ಜಲಪ್ರಯಳಕ್ಕೆ ಮುಂಚೆ ಜೀವಿಸಿದ ಮನುಷ್ಯರು ಇಬ್ಬರ ವಿಷಯದಲ್ಲಿಯೂ ಸತ್ಯವಾಗಿದೆ (ಯೂದ 6,7; 2 ಪೇತ್ರ 2:4; ಆದಿ 6:2-7).

*"ಎಂಟು"*– ನೋಹ, ಅವನ ಹೆಂಡತಿ, ಅವನ ಮೂವರು ಮಕ್ಕಳು ಮತ್ತು ಅವರ ಹೆಂಡತಿಯರು (ಆದಿ 6:10; 7:1).

*"ನೀರಿನ ಮೂಲಕ ರಕ್ಷಣೆ ಹೊಂದಿದರು"*– ಮುಂದಿನ ವಾಕ್ಯದ ಮೊದಲನೆಯ ಸಾಲಿನೊಂದಿಗೆ ಹೋಲಿಸಿ ನೋಡಿರಿ. ಜಲಪ್ರಯಳದ ನೀರಿನಲ್ಲಿ ಅವರಿಗೆ ರಕ್ಷಣೆಯಾದಂತೆಯೇ ಈಗ ನೀರಿನ ಮೂಲಕ ದೀಕ್ಷಾಸ್ನಾನ ಮಾಡಿಸಿಕೊಳ್ಳುವದರಿಂದ ವಿಶ್ವಾಸಿಗಳಿಗೆ ರಕ್ಷಣೆಯಾಗುತ್ತದೆ. ನಿಜವಾಗಿ ಹೇಳುವದಾದರೆ ನೀರಿನ ಮೇಲೆ ಪಯಣಿಸಿದ್ದರಿಂದ ನೀರು ಅವರನ್ನು ರಕ್ಷಿಸಲಿಲ್ಲ – ನಾವೆಯೊಳಗಿದ್ದದ್ದರಿಂದ ಅವರು ರಕ್ಷಣೆ ಹೊಂದಿದರು. ನೀರಿನ ಮೇಲೆ ಪಯಣಿಸಿದ ನಾವೆ

ಅವರನ್ನು ಜಲಪ್ರಯಳದ ನಾಶನ ಮತ್ತು ಮರಣದಿಂದ ತಪ್ಪಿಸಿತು. **21**

**3:21** *"ದೀಕ್ಷಾಸ್ನಾನ"*– ಮತ್ತಾಯ 3:6,13-16; 28:19; ಮಾರ್ಕ 16:16; ಅಪೊ 2:38 ರ ನೋಟ್ಸ್ ನೋಡಿರಿ. ಜಲಪ್ರಳಯದ ನೀರು ನೀರಿನ ದೀಕ್ಷಾಸ್ನಾನದ ಚಿತ್ರಣವಾಗಿದೆ. ಭಾಷಾಂತರ ಮಾಡಲಾಗಿರುವ ಗ್ರೀಕ್ ಪದದ "ಸ್ಪಷ್ಟವಾದ ಪ್ರತಿನಿಧಿಸುವಿಕೆ" ಇಬ್ರಿ 9:24 ರಲ್ಲಿ ಬಹುವಚನವಾಗಿ ಉಪಯೋಗಿಸಲ್ಪಟ್ಟಿದೆ (ಅಲ್ಲಿ "ಪ್ರತಿಗಳು" –ಎಂದು ಭಾಷಾಂತರ ಮಾಡಲಾಗಿದೆ). ಗುಡಾರದಲ್ಲಿ ಪವಿತ್ರ ಸ್ಥಳ ಇದ್ದ ಹಾಗೆಯೇ ಪರಲೋಕದಲ್ಲಿಯೂ ಒಂದು ಇದೆ, ಆದ್ದರಿಂದ ಜಲಪ್ರಳಯದ ನೀರು ದೀಕ್ಷಾಸ್ನಾನವನ್ನು ಪ್ರತಿನಿಧಿಸುವ ಸ್ಪಷ್ಟವಾದ ರೀತಿ ಅಥವಾ ಪ್ರತಿಯಾಗಿದೆ. ನೋಹ ಮತ್ತು ಅವನ ಕುಟುಂಬದವರು ನೀರಿನ ಮೇಲೆ ಪ್ರಯಾಣಿಸುವ ಮೂಲಕವಲ್ಲ ಬದಲಾಗಿ ನಾವೆಯೊಳಗೆ ಇದದ್ದರಿಂದ ರಕ್ಷಣೆ ಹೊಂದಿದರು ಎಂಬದು ಈಗ ಸ್ಪಷ್ಟವಾಗಿದೆ. ನಾವೆ ಯೇಸು ಕ್ರಿಸ್ತನಿಗೆ ಸೂಚನೆಯಾಗಿದೆ (ಆದಿ 7:24). ನೀರು ಅವರನ್ನು ರಕ್ಷಿಸಲಿಲ್ಲ, ಬದಲಾಗಿ ಅವರು ನೀರಿನ ಮೂಲಕ ರಕ್ಷಣೆ ಹೊಂದಿದರು (ವ 20). ಇಬ್ರಿ 11:7 ಅವರು ನಂಬಿಕೆಯಿಂದ ರಕ್ಷಣೆ ಹೊಂದಿದರು ಎಂಬದನ್ನು ಮತ್ತಷ್ಟು ಸ್ಪಷ್ಟಪಡಿಸುತ್ತದೆ. ದೀಕ್ಷಾಸ್ನಾನವು ಜಲಪ್ರಳಯದ ಸ್ಪಷ್ಟವಾದ ಪ್ರತಿನಿಧಿಸುವಿಕೆಯಾಗಿರುವದರಿಂದ, ದೀಕ್ಷಾಸ್ನಾನದ ಸಂಸ್ಕಾರದಿಂದಲೇ ರಕ್ಷಣೆಯಾಗುತ್ತದೆ ಎಂದು ಯೋಚಿಸಲು ಹೇಗೆ ಸಾಧ್ಯ? ಜಲಪ್ರಳಯವು ನೋಹ ಮತ್ತು ಅವನ ಕುಟುಂಬದವರನ್ನು ರಕ್ಷಿಸಿತು ಎಂದು ನಾವು ಯೋಚಿಸಿದರೆ ಮಾತ್ರವೇ ದೀಕ್ಷಾಸ್ನಾನವು ಜನರನ್ನು ರಕ್ಷಿಸುತ್ತದೆ ಎಂದು ಯೋಚಿಸಲು ಸಾಧ್ಯವಾಗುತ್ತದೆ. ರಕ್ಷಣೆ ಮತ್ತು ನೂತನ ಜೀವನಕ್ಕಾಗಿ ನಾವು ಮೊದಲು ನಮ್ಮ "ನಾವೆಯಾಗಿರುವ" ಯೇಸು ಕ್ರಿಸ್ತನಲ್ಲಿ ಸೇರಿ ರಕ್ಷಣೆ ಹಾಗೂ ನೂತನ ಜೀವನವನ್ನು ಹೊಂದಿದ ನಂತರವಷ್ಟೇ ನೀರಿನ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು. ಮಾರ್ಕ 16:16 ರೊಂದಿಗೆ ಹೋಲಿಸಿ ನೋಡಿರಿ. ಒಂದುವೇಳೆ ನಾವು ಯೇಸು ಕ್ರಿಸ್ತನಲ್ಲಿರದೆ ರಕ್ಷಣೆ ಹೊಂದದೆ ಇದ್ದರೆ ದೀಕ್ಷಾಸ್ನಾನ ಮಾಡಿಸಿಕೊಳ್ಳಬಾರದು. ದೀಕ್ಷಾಸ್ನಾನವು ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ಚಿತ್ರಣವಾಗಿದೆ ಹಾಗೂ ಆತನೊಂದಿಗೆ ನಮಗಿರುವ ಐಕ್ಯತೆಯನ್ನು ಸೂಚಿಸುತ್ತದೆ. ನಮ್ಮನ್ನು ಯಾವುದು ರಕ್ಷಿಸುತ್ತದೆ ಎಂಬದರ ಬಗ್ಗೆ ಸತ್ಯವೇದವು ಸ್ಪಷ್ಟವಾದ ಸಂಗತಿಗಳನ್ನು ತಿಳಿಸುತ್ತದೆ: ದೇವರು ತಾನೇ ತನ್ನ ಕರುಣೆಯಿಂದ ನಮ್ಮನ್ನು ರಕ್ಷಿಸುತ್ತಾನೆ – ತೀತ 3:4-5 ಯೇಸು ಕ್ರಿಸ್ತನ ರಕ್ತವು ನಮ್ಮನ್ನು ರಕ್ಷಿಸುತ್ತದೆ – ಎಫೆ 1:7 ಯೇಸು ಕ್ರಿಸ್ತನು ನಮ್ಮನ್ನು ರಕ್ಷಿಸುತ್ತಾನೆ – ಮತ್ತಾಯ 1:21; ರೋಮಾ 5:9-10 ಯೇಸು ಕ್ರಿಸ್ತನ ತ್ಯಾಗವು ನಮ್ಮನ್ನು ರಕ್ಷಿಸುತ್ತದೆ – ಇಬ್ರಿ 10:10,14 ನಾವು ನಂಬಿಕೆಯ ಮೂಲಕ ಕೃಪೆಯಿಂದ ರಕ್ಷಣೆ ಹೊಂದಿದ್ದೇವೆ – ಎಫೆ 2:8-9; ಅಪೊ 16:31; ರೋಮಾ 3:22-25; ಯೋಹಾನ 5:24; ಇಬ್ರಿ 10:39 ನಾವು ಸುವಾರ್ತೆಯನ್ನು ನಂಬುವದರಿಂದ ರಕ್ಷಣೆ ಹೊಂದುತ್ತೇವೆ – 1 ಕೊರಿಂಥ 15:1-4; ಅಪೊ 10:44-47 ಪೇತ್ರನು ಹೇಳುವದೇನೆಂದರೆ ನಮಗಿರುವ ಸಜೀವವಾದ ನಿರೀಕ್ಷೆಗೆ

ಕಾರಣ ದೇವರು ತನ್ನ ಕರುಣೆಯಿಂದ ನಮಗೆ ಪುನರುಜ್ಜೀವನವನ್ನು ಕೊಟ್ಟಿದ್ದಾನೆ – 1:3, ಮತ್ತು ನಮ್ಮ ನಂಬಿಕೆಯ ಗುರಿ ನಮ್ಮ ಆತ್ಮಗಳ ರಕ್ಷಣೆಯಾಗಿದೆ – 1:9.

*"ಅದು ಮೈಕೊಳೆಯನ್ನು ಹೋಗಲಾಡಿಸುವಂಥದ್ದಲ್ಲ"*– ದೀಕ್ಷಾಸ್ನಾನ ಇದಲ್ಲ ಎಂದು ಪೇತ್ರನು ಹೇಳಿದ್ದಾನೆ. "ಮೈಶರೀರ" ಎಂಬದು ಗ್ರೀಕ್ ಪದದ ಭಾಷಾಂತರವಾಗಿದ್ದು ಹಲವಾರು ಅರ್ಥಗಳನ್ನು ಕೊಡುತ್ತದೆ, ಅವುಗಳಲ್ಲಿ ಶರೀರ ಮತ್ತು ಮಾನವನಲ್ಲಿರುವ ಅವಿಧೇಯ ಸ್ವಭಾವವೂ ಸೇರಿದೆ. ದೀಕ್ಷಾಸ್ನಾನವು ಇವುಗಳಿಗೆ ಸಂಬಂಧಿಸಿದ್ದಲ್ಲ. ಅದು ಆಂತರ್ಯಕ್ಕೆ ಸಂಬಂಧಿಸಿದ್ದಾಗಿದೆ – "ದೇವರೊಂದಿಗೆ ಶುದ್ಧವಾದ ಮನಸ್ಸಾಕ್ಷಿಯ ಮನವಿಯಾಗಿದೆ" (ಇಬ್ರಿ 9:14 ರೊಂದಿಗೆ ಹೋಲಿಸಿ ನೋಡಿರಿ, ನಮ್ಮ ಮನಸ್ಸಾಕ್ಷಿಯನ್ನು ಯೇಸು ಕ್ರಿಸ್ತನ ರಕ್ತವು ಶುದ್ಧೀಕರಿಸುತ್ತದೆ ಎಂಬದು ನಮಗೆ ಗೊತ್ತಾಗುತ್ತದೆ). ದೀಕ್ಷಾಸ್ನಾನ ಮಾಡಿಸಿಕೊಳ್ಳುವವರು ದೇವರು ತಾವು ಹೇಗೆ ಜೀವಿಸಬೇಕೆಂದು ಬಯಸುತ್ತಾನೋ ಹಾಗೆ ನಾವು ಜೀವಿಸುತ್ತೇವೆ ಮತ್ತು ನಮ್ಮ ಮನಸ್ಸಾಕ್ಷಿಗೆ ವಿರುದ್ಧವಾದ ಕಾರ್ಯಗಳನ್ನು ನಾವು ಮಾಡುವದಿಲ್ಲ ಎಂದು ಸಾರ್ವಜನಿಕವಾಗಿ ಪ್ರಕಟಿಸುವದಾಗಿದೆ. ಸುನ್ನತಿಯು ಯಾವ ಯೆಹೂದ್ಯನನ್ನು ಹೇಗೆ ರಕ್ಷಿಸಲಾರದ್ದಾಗಿದೆಯೋ ಹಾಗೆಯೇ ದೀಕ್ಷಾಸ್ನಾನದ ಹೊರಗಿನ ಸಂಸ್ಕಾರವು ಯಾರನ್ನೂ ರಕ್ಷಿಸುವದಿಲ್ಲ – ರೋಮಾ 2:28-29 ನೋಡಿರಿ. ಆದರೆ ದೀಕ್ಷಾಸ್ನಾನವು ವ್ಯಕ್ತಪಡಿಸುವ ಹೃದಯದ ಸ್ಥಿತಿ ಅಂದರೆ ನಂಬಿಕೆಯಿಂದ ಕರ್ತನಾದ ಯೇಸು ಕ್ರಿಸ್ತನಿಗೆ ಒಪ್ಪಿಸುವದು ಅತ್ಯಂತ ಪ್ರಾಮುಖ್ಯವಾಗಿದೆ. ನಾವು "ಕರ್ತನಾದ ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ರಕ್ಷಣೆ ಹೊಂದಿದ್ದೇವೆ" ಎಂಬದನ್ನು ಗಮನಿಸಿರಿ – ರೋಮಾ 4:25 ರೊಂದಿಗೆ ಹೋಲಿಸಿ ನೋಡಿರಿ. **22**

- **3:22** ಅಪೊ 2:33; ಎಫೆ 1:20-21; ಫಿಲಿಪ್ಪಿ 2:9-11; ಇಬ್ರಿ 1:3.

# 4 1-2

**4:1-2** ನಮ್ಮ ಪಾಪದಿಂದ ಬಿಡಿಸಲು ಯೇಸು ಕ್ರಿಸ್ತನು ಬಾಧೆಪಟ್ಟನು (2:24; 3:18). ಪಾಪದ ವಿರುದ್ಧ ನಾವು ಮಾಡುವ ಹೋರಾಟದಲ್ಲಿ ಬಾಧೆಪಡಲು ನಾವು ಬಯಸುವವರಾಗಿರಬೇಕು. ಒಂದುವೇಳೆ ನಮಗೆ ಈ ಮನೋಭಾವನೆ ಇದ್ದರೆ ಅದು ರಣರಂಗದಲ್ಲಿ ನಮಗೆ ಆಯುಧವಾಗಿರುತ್ತದೆ. ಯೇಸು ಕ್ರಿಸ್ತನು ಪಾಪದ ಪಾಲಿಗೆ ಸತ್ತನು; ವಿಶ್ವಾಸಿಗಳು ಯೇಸು ಕ್ರಿಸ್ತನೊಂದಿಗೆ ತಮಗಿರುವ ಐಕ್ಯತೆಯನ್ನು ಗುರುತಿಸಿಕೊಳ್ಳಬೇಕು ಮತ್ತು ಯೇಸು ಕ್ರಿಸ್ತನಲ್ಲಿ ತಾವೂ ಪಾಪದ ಪಾಲಿಗೆ ಸತ್ತಿದ್ದೇವೆ ಎಂಬದನ್ನು ಅರಿತುಕೊಳ್ಳಬೇಕು. ರೋಮಾ 6:5-13; ಕೊಲೊ 3:3 ನೋಡಿರಿ. ಯೇಸು ಕ್ರಿಸ್ತನ ಶ್ರಮೆಗಳ ಬೆಳಕಿನಲ್ಲಿ ನಾವು ಪಾಪದಿಂದ ಸಂಪೂರ್ಣವಾಗಿ ಹೊರಗೆ ಬರಬೇಕು. ನಾವು ನಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳಲು ಜೀವಿಸುವವರಾಗಿರದೆ ದೇವರ ಚಿತ್ತವನ್ನು ನೆರವೇರಿಸಲು

ಜೀವಿಸಬೇಕು (ರೋಮಾ 8:5,12; 12:1-2; ಕೊಲೊ 1:9; 4:12; 1 ಥೆಸ 4:3; ಇಬ್ರಿ 13:21). **3**

**4:3** ತೀತ 3:3; 1 ತಿಮೊ 1:13; ಎಫೆ 2:1-3; 1 ಕೊರಿಂಥ 6:11 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನ ಸುವಾರ್ತೆಯು ಆಳವಾದ ಪಾಪದಲ್ಲಿರುವ ಜನರನ್ನು ತಲುಪುತ್ತದೆ ಮತ್ತು ಅವರನ್ನು ಶಾಶ್ವತವಾಗಿ ಬದಲಾಯಿಸುತ್ತದೆ. ಇಲ್ಲಿ ತಿಳಿಸಲಾಗಿರುವ ವಿಗ್ರಹಾರಾಧಕ ಕಾರ್ಯಗಳು ಮತ್ತು ಜೀವನ ಶೈಲಿಗಳು ಜೊತೆಜೊತೆಯಾಗಿ ಸಾಗುತ್ತವೆ.

*"ಅಸಹ್ಯವಾದ ವಿಗ್ರಹಾರಾಧನೆ"*– ಧರ್ಮೋ 7:25; 12:31; 13:12-14; 17:2-5; 27:15; 29:17; 32:16. **4**

**4:4** ಹಳೆಯ ಕಾರ್ಯಗಳನ್ನು ತ್ಯಜಿಸಿರುವ ವಿಶ್ವಾಸಿಗಳ ಪರಿಶುದ್ಧವಾದ ಜೀವನವು ಅದರಲ್ಲಿಯೇ ಮುಂದುವರೆಯುವವರಿಗೆ ಗದರಿಕೆ ಮತ್ತು ಎಚ್ಚರಿಕೆಯಾಗಿದೆ. ಇದು ದೇವರಲ್ಲಿ ಭಯಭಕ್ತಿಯಿಲ್ಲದವರ ದೂಷಣೆ ಮತ್ತು ಗುಣಗುಟ್ಟುವಿಕೆಗೆ ಕಾರಣವಾಗುತ್ತದೆ. ಮತ್ತಾಯ 12:36; ಅಪೊ 10:42; 17:31; ರೋಮಾ 2:16; 14:12; 2 ತಿಮೊ 4:1; ಇಬ್ರಿ 4:13 ನೋಡಿರಿ. **5**

**4:5** *"ಉತ್ತರ ಕೊಡಬೇಕು"*– ರೋಮಾ 14:12. **6**

**4:6** ಇದು ಮತ್ತೊಂದು ಕಷ್ಟ ಹಾಗೂ ಅಸ್ಪಷ್ಟವಾದ ವಾಕ್ಯವಾಗಿದೆ. ಇದರ ಅರ್ಥ ಹೀಗೂ ಇರಬಹುದು: ಈಗ ಮೃತಪಟ್ಟಿರುವವರು ಮೃತಪಡುವ ಮೊದಲು ಭೂಲೋಕದಲ್ಲಿ ಜೀವದಿಂದಿರುವಾಗ ಸುವಾರ್ತೆಯನ್ನು ಕೇಳಿಸಿಕೊಂಡಿದ್ದಾರೆ. ಈಗ ಜೀವಿಸುತ್ತಿರುವ ನಮಗೂ ಅವರಿಗೂ ಉದ್ದೇಶ ಒಂದೇ – ಆತ್ಮೀಕರಾಗಿ ಜೀವಿಸಬೇಕು ಮತ್ತು "ದೇವರ ಚಿತ್ತದನುಸಾರವಾಗಿ ಜೀವಿಸಬೇಕು" (ವ 2). ಕೆಲವು ಬೋಧಿಸುವದೇನೆಂದರೆ ಈ ವಾಕ್ಯದ ಅರ್ಥ ಮಾನವರು ಸತ್ತ ನಂತರ ಅವರಿಗೆ ಸುವಾರ್ತೆಯನ್ನು ಸಾರಲಾಗುತ್ತದೆ, ಯಾಕಂದರೆ ಅವರು ಬದುಕಿದ್ದಾಗ ಅವರಿಗೆ ಸುವಾರ್ತೆಯನ್ನು ಸಾರುವ ಅವಕಾಶವು ಕೆಲವೊಮ್ಮೆ ಸಿಗಲಿಲ್ಲವಾಗಿರಬಹುದು. ಅವರು ಈ ವಾಕ್ಯವನ್ನು 3:19 ರೊಂದಿಗೆ ಸೇರಿಸುತ್ತಾರೆ ಮತ್ತು "ಆತ್ಮಗಳು" ಎಂಬದಾಗಿ ಹೇಳಿರುವಂಥದ್ದು ಮೃತಪಟ್ಟಿರುವವರ ಆತ್ಮಗಳು ಎಂದು ನಂಬುತ್ತಾರೆ. ಆದರೆ ಸತ್ಯವೇದದ ಯಾವುದೇ ಪುಸ್ತಕದಲ್ಲಿಯೂ ಇಂಥ ಯಾವ ಬೋಧನೆಯೂ ಇಲ್ಲ, ಆದ್ದರಿಂದ ನಾವು ಅತ್ಯಂತ ಪ್ರಾಮುಖ್ಯವಾಗಿರುವ ಸಂದೇಶವನ್ನು ಮನುಷ್ಯರ ಊಹೆಯ ಮೇರೆಗೆ ನಂಬಬಾರದು ಯಾಕಂದರೆ ಇದು ಒಂದು ಅಥವಾ ಎರಡು ವಚನದಲ್ಲಿರುವ ಅಸ್ಪಷ್ಟ ಮತ್ತು ಅನುಮಾನ ಹುಟ್ಟಿಸುವ ಪದಗಳಾಗಿವೆ. ಒಂದುವೇಳೆ ಅಂಥ ಬೋಧನೆ ಏನಾದರೂ ಸತ್ಯವಾಗಿದ್ದರೆ, ದೇವರು ಅದನ್ನು ನಮಗೆ ಪ್ರಕಟಿಸಿಲ್ಲ ಮತ್ತು ಆತನು ಪ್ರಕಟಿಸಿರುವ ವಿಷಯಗಳು ಮಾತ್ರವೇ ನಮಗೆ ತಿಳಿದಿವೆ – ಧರ್ಮೋ 29:29. ಇತರರು "ಮೃತಪಟ್ಟವರು" ಎಂದರೆ "ಪಾಪಗಳು ಮತ್ತು ಅಪರಾಧಗಳಲ್ಲಿ" ಮೃತಪಟ್ಟವರು ಎಂದು

ಬೋಧಿಸುತ್ತಾರೆ (ಎಫೆ 2:1). ಈ ವ್ಯಾಖ್ಯಾನವು ಇಲ್ಲಿ ಸಮಂಜಸವಲ್ಲ ಎಂದು ಅನ್ನಿಸುತ್ತದೆ. **7**

**4:7** *"ಹತ್ತಿರವಾಗಿದೆ"*– ರೋಮಾ 13:12; 5:9; ಪ್ರಕ 1:3; ಯಾಕೋಬ 5:8; 2 ಪೇತ್ರ 3:8-9; ಮತ್ತಾಯ 24:36,42. ಈ ಯುಗದ ಸಮಾಪ್ತಿಯ ಸಮಯದಲ್ಲಿ ಮಹಾ ಕಷ್ಟಗಳು ಮತ್ತು ಶೋಧನೆಗಳು, ವಂಚನೆಗಳು ಎದುರಾಗುವವು (ಮತ್ತಾಯ 24:4-14,21-25). ಯೇಸು ಕ್ರಿಸ್ತನಿಗಾಗಿ ಸತ್ಯವಂತರಾಗಿ ಮತ್ತು ದೃಢರಾಗಿ ನಿಲ್ಲಬೇಕಾದರೆ ಪ್ರಾರ್ಥನೆಯು ಬಹಳ ಪ್ರಾಮುಖ್ಯವಾದ ಸಂಗತಿಯಾಗಿರುತ್ತದೆ. ನಿಜವಾದ ಪ್ರಾರ್ಥನೆಗೆ ಬೇಕಾಗಿರುವ ಎರಡು ಪ್ರಾಮುಖ್ಯವಾದ ಗುಣಗಳನ್ನು ಇಲ್ಲಿ ನೋಡಿರಿ. ಲೂಕ 21:36; 22:40,46 ರೊಂದಿಗೆ ಹೋಲಿಸಿರಿ.

*"ಸ್ವಸ್ಥಚಿತ್ತರಾಗಿರಿ"*– ಗ್ರೀಕ್ ಪದವು ಆರೋಗ್ಯವಂತವಾಗಿರುವ, ಭ್ರಷ್ಟವಾದ ಆಲೋಚನೆಗಳಿಂದ ದೂರವಾಗಿರುವ, ಪ್ರತಿಯೊಂದು ರೀತಿಯಲ್ಲಿಯೂ ಸ್ವಸ್ಥವಾಗಿರುವ ಮನಸ್ಸನ್ನು ಸೂಚಿಸುತ್ತದೆ. **8**

**4:8** *"ಪ್ರೀತಿ"*– 1:22; ಯೋಹಾನ 13:34; 15:12-17; 1 ಯೋಹಾನ 3:11,18; 4:8. ಪೇತ್ರನು ದೈವೀಕ ಪ್ರೀತಿಗೆ ಗ್ರೀಕ್ ಪದವನ್ನು ಬಳಸಿದ್ದಾನೆ. 1 ಕೊರಿಂಥ 13:1 ನೋಡಿರಿ.

*"ಮುಚ್ಚುತ್ತದೆ"*– ಇದರ ಅರ್ಥ ಏನಾಗಿದೆ ಮತ್ತು ಏನಾಗಿಲ್ಲ ಎಂಬದನ್ನು ಅರ್ಥಮಾಡಿಕೊಳ್ಳಲು ನಾವು ಪ್ರಯತ್ನಿಸಬೇಕು. ಪೇತ್ರನು ಸಭೆಯ ಕ್ರಮಶಿಕ್ಷಣ, ಸ್ಥಳೀಯ ಸಭೆಯು ಬೈಲಿಗೆ ಬಂದು ಹೊರಗೆ ಹಾಕಬೇಕಾದ ಪಾಪವನ್ನು ಮುಚ್ಚಿಡುವ ಬಗ್ಗೆ ಮಾತನಾಡುತ್ತಾ ಇಲ್ಲ. ಮತ್ತಾಯ 18:15-17; ಅಪೊ 5:1-11; 1 ಕೊರಿಂಥ 5:1-5,12,13 ರೊಂದಿಗೆ ಹೋಲಿಸಿ ನೋಡಿರಿ. ಪ್ರೀತಿ ವೈಯಕ್ತಿಕ ಸಂಬಂಧಗಳಲ್ಲಿ ಹೇಗೆ ಕಾರ್ಯ ಮಾಡುತ್ತದೆ ಎಂಬದನ್ನು ಪೇತ್ರನು ತೋರಿಸುತ್ತಾ ಇದ್ದಾನೆ. ಜ್ಞಾನೋ 10:12 ನೋಡಿರಿ. ಪ್ರೀತಿ ಇತರರ ಪಾಪಗಳನ್ನು ಬೈಲಿಗೆ ತರುವದನ್ನು ಇಷ್ಟಪಡುವದಿಲ್ಲ. ಅದು ಯಾರಿಗೂ ನಾಚಿಕೆ ಮತ್ತು ಅವಮಾನವನ್ನುಂಟು ಮಾಡಲು ಬಯಸುವದಿಲ್ಲ. ಪಾಪಗಳನ್ನು ಮುಚ್ಚಲು ಶಕ್ತನಾಗಿರುವ ದೇವರ ಕಡೆಗೆ ಪ್ರತಿಯೊಬ್ಬರನ್ನು ನಡೆಸಲು ಬೇಕಾದ ಪ್ರಯತ್ನಗಳನ್ನು ಮಾತ್ರವೇ ಮಾಡುತ್ತದೆ (ಕೀರ್ತನೆ 32:1-2; ರೋಮಾ 4:6-8; ಯಾಕೋಬ 5:20 ರೊಂದಿಗೆ ಹೋಲಿಸಿ ನೋಡಿರಿ). ಪ್ರೀತಿಯು ಕ್ಷಮಿಸುತ್ತದೆ ಮತ್ತು ಕ್ಷಮಿಸುವ ಕಾರ್ಯವನ್ನು ಮುಂದುವರೆಸುತ್ತದೆ ಎಂಬದನ್ನು ಪೇತ್ರನು ವಿಶ್ವಾಸಿಗಳಿಗೆ ಜ್ಞಾಪಕಪಡಿಸುತ್ತಾ ಇದ್ದಾನೆ (1 ಕೊರಿಂಥ 13:5; ಮತ್ತಾಯ 18:21-22). ಇದಲ್ಲದೆ ಅವನು ಹೇಳುವದೇನೆಂದರೆ ಒಂದುವೇಳೆ ನಮ್ಮಲ್ಲಿ ಪ್ರೀತಿ ಇದ್ದರೆ ದೇವರು ಬಹಳವಾಗಿ ನಮ್ಮ ಪಾಪಗಳನ್ನು ಮುಚ್ಚುತ್ತಾನೆ (ಲೂಕ 7:47-50 ರೊಂದಿಗೆ ಹೋಲಿಸಿ ನೋಡಿರಿ). ಆತನು *ಖಂಡಿತವಾಗಿಯೂ* ಪ್ರೀತಿಯ ಸ್ವಭಾವವನ್ನು ವ್ಯಕ್ತಪಡಿಸುತ್ತಾ ಇದ್ದಾನೆ. ದೈವೀಕ ಪ್ರೀತಿಯು ಯಾವಾಗಲೂ ನೀತಿ ಹಾಗೂ

ಪರಿಶುದ್ಧತೆಯೊಂದಿಗೆ ಸತತವಾಗಿ ಪಾಪಗಳನ್ನು ಮುಚ್ಚುವ ಮಾರ್ಗವನ್ನು ಎದುರುನೋಡುತ್ತಾ ಇರುತ್ತದೆ. ಆದಿ 3:21; 9:21-23; ಪ್ರಕ 3:18-19 ರೊಂದಿಗೆ ಹೋಲಿಸಿ ನೋಡಿರಿ. ಪ್ರೀತಿ ಒಂದುವೇಳೆ ಇತರರಿಅಗೆ ಅಪಾಯಕಾರಿಯಾಗಿದ್ದರೆ ಅಥವಾ ಅವರು ಪಾಪದಲ್ಲಿ ಮುಂದುವರೆಯಲು ಕಾರಣವಾಗಿದ್ದರೆ ಅವರ ಪಾಪಗಳನ್ನು ಎಂದಿಗೂ ಮುಚ್ಚಲಾರದು. ಪ್ರೀತಿಯು ಯಾವಾಗಲೂ ಪಾಪ ಮಾಡುವವರು ತಮ್ಮ ಪಾಪಗಳನ್ನು ತೊರೆಯುವಂತೆ ಮಾಡಲು ಪ್ರಯತ್ನಿಸುತ್ತದೆ (ಜ್ಞಾನೋ 28:13 ರೊಂದಿಗೆ ಹೋಲಿಸಿ ನೋಡಿರಿ). ನಿಜವಾದ ಪ್ರೀತಿಯು ಪಾಪವನ್ನು ಯಾವ ರೀತಿಯಲ್ಲಿಯೂ ಪ್ರೋತ್ಸಾಹಪಡಿಸುವದಿಲ್ಲ. **9**

**4:9** ರೋಮಾ 12:13; 16:23; ಇಬ್ರಿ 3:2; 3 ಯೋಹಾನ 8 . ಇದು ಪ್ರೀತಿಯನ್ನು ವ್ಯಕ್ತಪಡಿಸುವ ಮಾರ್ಗಗಳಲ್ಲಿ ಒಂದಾಗಿದೆ. **10**

**4:10** *"ಕೃಪಾವರ"*– ರೋಮಾ 12:6-8; 1 ಕೊರಿಂಥ 12:4-11; ಎಫೆ 4:7-13.

*"ಒಬ್ಬರಿಗೊಬ್ಬರು ಸೇವೆ ಮಾಡಿಕೊಳ್ಳಿರಿ"*– ಪ್ರೀತಿಸುವವರು ದೇವರು ಕೊಟ್ಟಿರುವ ಕೃಪಾವರಗಳನ್ನು ಇತರರಿಗೆ ಸಹಾಯ ಮಾಡಲು ಉಪಯೋಗಿಸುತ್ತಾರೆಯೇ ಹೊರತು ವೈಯಕ್ತಿಕ ಅಭಿವೃದ್ಧಿ, ಹಣ, ಪ್ರಖ್ಯಾತಿ ಇತ್ಯಾದಿ ಕಾರ್ಯಗಳಿಗಾಗಿ ಉಪಯೋಗಿಸುವದಿಲ್ಲ.

*"ಒಳ್ಳೆಯ ಮನೆವಾರ್ತೆಯವರು"*– ಮತ್ತಾಯ 24:45-47; 1 ಕೊರಿಂಥ 4:1-2. **11**

**4:11** *"ಬೋಧಿಸುವದರಲ್ಲಿ"*– ಸತ್ಯವೇದದ ಆಧಾರದಲ್ಲಿ ಮಾಡಲಾಗುವ ಬೋಧನೆಗಳನ್ನು ಸೂಚಿಸುತ್ತದೆ. ಬೋಧಿಸುವವರು ತಾವು ಕ್ರಿಸ್ತನ ಸ್ಥಾನದಲ್ಲಿ ಆತನ ಪ್ರತಿನಿಧಿಯಾಗಿ ಮತ್ತು ರಾಯಭಾರಿಯಾಗಿ ನಾವು ನಿಂತಿದ್ದೇವೆ ಎಂಬ ಅರಿವುಳ್ಳವರಾಗಿರಬೇಕು ಮತ್ತು ಅಧಿಕಾರದಿಂದ ದೇವರ ವಾಕ್ಯವನ್ನು ಬೋಧಿಸಬೇಕು.

*"ದೇವರಿಂದ ಶಕ್ತಿಯನ್ನು ಹೊಂದಿದವನಾಗಿ"*– ನಾವು ನಮ್ಮ ಸ್ವಂತ ಶಕ್ತಿ ಅಥವಾ ಸಾಮರ್ಥ್ಯದಲ್ಲಿ ಕಾರ್ಯ ಮಾಡಲು ಮುಂದಾಗುವ ಸಾಧ್ಯತೆಗಳು ಬಹಳವಾಗಿರುತ್ತವೆ. ಆದರೆ ಅದರಿಂದ ಯಾವುದೇ ಪ್ರಯೋಜನವಾಗುವದಿಲ್ಲ.

*"ದೇವರಿಗೆ ಸೋತ್ರ ಉಂಟಾಗುವದು"*– ನಾವು ಮಾಡುವ ಎಲ್ಲಾ ರೀತಿಯ ಸೇವೆಗಳ ಉದ್ದೇಶ ಇದು ಮಾತ್ರವೇ ಆಗಿರಬೇಕು. ತಮ್ಮ ಸ್ವಂತ ಘನತೆಗಾಗಿ ಬೋಧಿಸುವವರು ಅಥವಾ ಸೇವೆ ಮಾಡುವವರು (ಕೆಲವೊಮ್ಮೆ ತಮಗರಿವಿಲ್ಲದೆಯೇ) ದೇವರಿಗೆ ಸಲ್ಲಬೇಕಾದ ಸ್ತೋತ್ರಗಳನ್ನು ಕದ್ದುಕೊಳ್ಳಲು ಪ್ರಯತ್ನಿಸುವವರಾಗಿದ್ದಾರೆ. ಮತ್ತಾಯ 6:2,5; 1 ಕೊರಿಂಥ 10:31 ರೊಂದಿಗೆ ಹೋಲಿಸಿ ನೋಡಿರಿ. **12**

**4:12** *"ಆಶ್ಚರ್ಯಪಡಬೇಡಿರಿ"*– ಯೇಸು ಕ್ರಿಸ್ತನು ಮತ್ತು ಆತನ ಅಪೊಸ್ತಲರು ಕಷ್ಟಗಳು ಹಾಗೂ ಹಿಂಸೆಗಳು ಎದುರಾಗುತ್ತವೆ ಎಂದು ಮತ್ತೆಮತ್ತೆ ಎಚ್ಚರಿಕೆಗಳನ್ನು ಕೊಟ್ಟಿದ್ದಾರೆ (2:20-21; 4:1; ಯೋಹಾನ 16:33; ಅಪೊ 14:22; ರೋಮಾ 8:17; 2 ತಿಮೊ 3:12).

*"ಪುಟಕ್ಕೆ ಹಾಕುವದು"*– ಪೇತ್ರನು ಬೆಂಕಿಯಿಂದಾಗುವ ಶೋಧನೆಯ ಬಗ್ಗೆ ಮಾತನಾಡುತ್ತಾ ಇದ್ದಾನೆ – ಲೋಹಗಳನ್ನು ಬೆಂಕಿಯಿಂದ ಶೋಧಿಸಲಾಗುತ್ತದೆ. 1:7; ಕೀರ್ತನೆ 66:10 ನೋಡಿರಿ. ದೇವರು ಬೆಂಕಿಯಂಥ ಕಷ್ಟಗಳಿಗೆ ಅನುಮತಿಸುತ್ತಾನೆ ಅಥವಾ ನಮ್ಮನ್ನು ಶೋಧಿಸಲು ಮತ್ತು ಪರೀಕ್ಷಿಸಲು ಅವುಗಳನ್ನು ಕಳುಹಿಸುತ್ತಾನೆ. **13**

**4:13** *"ಸಂತೋಷಿಸಿರಿ"*– ಮತ್ತಾಯ 5:11-12; ಅಪೊ 5:41; ರೋಮಾ 5:3; ಕೊಲೊ 1:24; ಯಾಕೋಬ 1:2. ಇದು ಕಷ್ಟಗಳೆದುರಾಗುವ ಸಮಯದಲ್ಲಿ ಏನು ಮಾಡಬೇಕೆಂದು ದೇವರು ಯಾವಾಗಲು ವಿಶ್ವಾಸಿಗಳಿಗೆ ಕೊಡುವ ಸಲಹೆಯಾಗಿದೆ. ಅವುಗಳೆದುರಾಗುವಾಗ ನಮ್ಮ ಆಂತರ್ಯದ ಸ್ಥಿತಿ ಹೇಗಿರುತ್ತದೆ ಎಂಬದು ಬಹಳ ಪ್ರಾಮುಖ್ಯವಾದ ಸಂಗತಿಯಾಗಿದೆ. ಕಷ್ಟಗಳನ್ನನುಭವಿಸುವಾಗ ನಾವು ಎಂದಿಗೂ ಗುಣಗುಟ್ಟಬಾರದು ಮತ್ತು ದೂರುಗಳನ್ನು ಹೇಳಬಾರದು, ಬಳಲಿಹೋಗಬಾರದು ಅಥವಾ ನಿರಾಸೆಗೊಳ್ಳಬಾರದು. ನಮಗೆ ಹಿತಕರವಾದ ಕಾರ್ಯಗಳನ್ನು ಹೇಗೆ ಮಾಡಬೇಕು ಎಂಬದು ದೇವರಿಗೆ ಗೊತ್ತಿದೆ ಎಂದು ನಾವು ಆತನಲ್ಲಿ ಭರವಸೆಯನ್ನಿಡಬೇಕು ಮತ್ತು ರೋಮಾ 8:28 ರ ಪ್ರಕಾರ ಸಂತೋಷಿಸಬೇಕು. ಪುಟಕ್ಕೆ ಹಾಕುವಂಥ ಕಷ್ಟಗಳನ್ನೆದುರಿಸುವದು "ಯೇಸು ಕ್ರಿಸ್ತನ ಬಾಧೆಗಳಲ್ಲಿ ಭಾಗಿಯಾಗುವದಕ್ಕೆ" –ಸಮಾನವಾಗಿದೆ ಎಂಬದನ್ನು ಗಮನಿಸಿರಿ (2 ಕೊರಿಂಥ 1:5).

*"ಆತನ ಮಹಿಮೆಯು ಪ್ರತ್ಯಕ್ಷವಾಗುವಾಗ"*– ತೀತ 2:13. ಆಗ ನಮಗೆ ನಾವು ಎದುರಿಸಿದ ಕಷ್ಟಗಳು ಹಾಗೂ ಶ್ರಮೆಗಳಿಗೆ ಬಹುಮಾನ ದೊರೆಯುತ್ತದೆ (ರೋಮಾ 8:17-18; 2 ಕೊರಿಂಥ 4:17-18). **14**

**4:14** *"ಧನ್ಯರು"*– ಲೂಕ 6:22 ನೋಡಿರಿ. ನಾವು ಯೇಸು ಕ್ರಿಸ್ತನ ವಿಶ್ವಾಸಿಗಳಾಗಿದ್ದೇವೆ ಎಂಬ ಕಾರಣವಲ್ಲದೆ ಬೇರೆ ಯಾವ ಕಾರಣಕ್ಕೂ ಇವುಗಳು ನಮಗೆ ಎದುರಾಗುತ್ತಾ ಇಲ್ಲ ಎಂಬದಾಗಿ ಯೋಚಿಸುತ್ತಾರೋ ಅವರಿಗೆ ಮಾತ್ರವೇ ಇದು ಅನ್ವಯವಾಗುತ್ತದೆ.

*"ತೇಜೋಮಯನಾದ ಆತ್ಮನು"*– ದೇವರಾತ್ಮನು ಪರಲೋಕದ ಪ್ರಭಾವದಿಂದ ಬರುತ್ತಾನೆ ಮತ್ತು ವಿಶ್ವಾಸಿಗಳನ್ನು ಅಲ್ಲಿಗೆ ನಡೆಸುತ್ತಾನೆ. ಈಗ ಆತನು ಅವರಲ್ಲಿ ನೆಲೆಸಿದ್ದಾನೆ (ಅಪೊ 1:8; 1 ಯೋಹಾನ 2:20), ಮತ್ತು ಅವರು ತಾಳ್ಮೆಯಿಂದ ಯೇಸು ಕ್ರಿಸ್ತನ ನಿಮಿತ್ತ ಶ್ರಮೆಗಳನ್ನು, ಅನುಮಾನಗಳನ್ನು ಸಹಿಸಿಕೊಳ್ಳುತ್ತಾ ಇರುವದು ಇದಕ್ಕೆ ಪುರಾವೆಯಾಗಿದೆ. **15-16**

**4:15-16** 2:19-20 ನೋಡಿರಿ. **16**

**4:16** *"ಅವನು ನಾಚಿಕೆಪಡದೆ ಇರಲಿ"*– ಅಪೊ 5:41; ಇಬ್ರಿ 11:26 ರೊಂದಿಗೆ ಹೋಲಿಸಿ ನೋಡಿರಿ. ಕ್ರೈಸ್ತರು ಆತನ ನಾಮದ ನಿಮಿತ್ತ ಜೀವಿಸುವಾಗ ಯಾಕೆ ಕಷ್ಟಗಳನ್ನು ಅನುಭವಿಸಬೇಕು? ನಾವು ಇಂಥ ಮನಸ್ಥಿತಿಯ ಲೋಕದಲ್ಲಿ ಜೀವಿಸುವವರಾಗಿದ್ದೇವೆ (ಯೋಹಾನ 15:18-25; 16:1-4). ಲೋಕವು ಬೇಕೆಂದೇ ಕತ್ತಲೆಯಲ್ಲಿದೆ ಮತ್ತು ಆತ್ಮೀಕ

ಬೆಳಕನ್ನು ದ್ವೇಷಿಸುತ್ತದೆ (ಯೋಹಾನ 3:19-20). **17**

**4:17** *“ನ್ಯಾಯತೀರ್ಪು”*– 1 ಕೊರಿಂಥ 11:31-32; 2 ಥೆಸ 1:5. ದೇವರು ವಿಶ್ವಾಸಿಗಳ ವಿಷಯದಲ್ಲಿ ತೀರ್ಪು ಮಾಡುತ್ತಾನೆ ಮತ್ತು ಅವರನ್ನು ಕ್ರಮಶಿಕ್ಷಣಕ್ಕೆ ನಡೆಸುತ್ತಾನೆ ಆದ್ದರಿಂದ ಲೋಕದವರೊಂದಿಗೆ ಅವರಿಗೆ ನ್ಯಾಯತೀರಿಸುವ ಅವಶ್ಯಕತೆ ಇರುವದಿಲ್ಲ.

*“ಮನೆ”*– ಗಲಾ 6:10; ಎಫೆ 2:19.

*“ನಂಬಲೊಲ್ಲದವರು”*– ಯೋಹಾನ 3:36; 2 ಥೆಸ 1:8-9. ಅಪೊ 22:10 ರ ನೋಟ್ ನೋಡಿರಿ. **18**

**- 4:18** ಜ್ಞಾನೋ 11:31.

*“ರಕ್ಷಣೆ ಹೊಂದುವದು ಕಷ್ಟ”*– ಮಾರ್ಕ 10:24. ನೀತಿವಂತನು ರಕ್ಷಣೆ ಹೊಂದುವದು ಕಷ್ಟ ಯಾಕೆ? ಕೆಳಗೆ ಕೊಡಲಾಗಿರುವ ವಿಷಯಗಳನ್ನು ಆಲೋಚಿಸಿರಿ: ಅವರಿಗೆ ವೈರಿಗಳು ಅನೇಕರು ಮತ್ತು ಬಲಿಷ್ಠರು – 5:8; ಎಫೆ 6:11-12. ಅವರು ಬಲಹೀನರು ಮತ್ತು ಪಾಪದ ಸ್ವಭಾವವುಳ್ಳವರು – ರೋಮಾ 6:19; 7:18; 8:26; ಗಲಾ 5:16-17; 1 ಯೋಹಾನ 1:8. ಜನರು ತಾವು ಬಿತ್ತುವದನ್ನೇ ಕೊಯ್ಯುತ್ತಾರೆ ಎಂಬ ದೇವರ ನಿಯಮವು ವಿಶ್ವಾಸಿಗಳಿಗಾಗಿ ಬದಲಾಗುವದಿಲ್ಲ – ರೋಮಾ 2:6-8; ಗಲಾ 6:7-8. ದೇವರು ಅವರನ್ನು ಅವರ ನಡವಳಿಕೆಗಳಲ್ಲಿ ನೀತಿವಂತರನ್ನಾಗಿ ಮಾಡಬೇಕು. ದೇವರ ನಿಯಮಗಳು ಅತ್ಯಂತ ಉನ್ನತವಾದವುಗಳು. ಆತನು ನೇಮಿಸಿರುವ ಕೆಲವು ಆದೇಶಗಳನ್ನು ಆತನ ಜನರು ಖಂಡಿತವಾಗಿಯೂ ಪಾಲಿಸಬೇಕು. ಅವರು ಇಕ್ಕಟ್ಟಾದ ಬಾಗಲಿನಿಂದ ಒಳಗೆ ಹೋಗಲು ಪ್ರಯತ್ನಿಸುವದು ಮಾತ್ರವಲ್ಲ ಇಕ್ಕಟ್ಟಾದ ಮಾರ್ಗದಲ್ಲಿಯೇ ನಡೆಯಬೇಕು (ಮತ್ತಾಯ 7:13-14). ಅವರು ತಮ್ಮ ಚಿತ್ತವನ್ನು ನಿರಾಕರಿ ದೇವರ ಚಿತ್ತದಂತೆ ನಡೆಯುವದನ್ನು (ಮತ್ತಾಯ 7:21) ಮತ್ತು ಯೇಸು ಕ್ರಿಸ್ತನನ್ನು ಹಿಂಬಾಲಿಸುವ ಸಲುವಾಗಿ ತಮಗಿರುವದನ್ನೆಲ್ಲಾ ತ್ಯಾಗ ಮಾಡುವದನ್ನು (ಲೂಕ 14:33) ಕಲಿತುಕೊಳ್ಳಬೇಕು. ಅವರು ಪರಿಶುದ್ಧತೆ ಅಭ್ಯಾಸ ಮಾಡುವದನ್ನು ಕಲಿತುಕೊಳ್ಳಬೇಕು (ಯೋಹಾನ 10:27; ಇಬ್ರಿ 12:6). ಅವರನ್ನು ಕಷ್ಟಕರವಾದ ಸಮಸ್ಯೆಗಳು ಮತ್ತು ಅಧಿಕವಾದ ಕ್ರಮಶಿಕ್ಷಣದಿಂದ ಜೋಪಾನ ಮಾಡಬೇಕು (ಇಬ್ರಿ 12:5-13). ಮತ್ತು ಅವರು ಕಡೆಯ ತನಕ ನಂಬುವವರಾಗಿರಬೇಕು (ಇಬ್ರಿ 10:38-39). ನೀತಿವಂತನು ರಕ್ಷಣೆ ಹೊಂದುವದು ಕಷ್ಟವಾಗಿದೆಯಾದರೂ ನಿಶ್ಚಯವಾಗಿದೆ (1:5; ಯೋಹಾನ 6:39; 10:28; ರೋಮಾ 5:9-10).

*“ಭಕ್ತಿಹೀನರು”*– ನೀತಿವಂತನು ರಕ್ಷಣೆ ಹೊಂದುವದು ಕಷ್ಟವಾಗಿರುವಾಗ, ಯೇಸು ಕ್ರಿಸ್ತನನ್ನು, ಆತನ ಇಕ್ಕಟ್ಟಾದ ಮಾರ್ಗವನ್ನು ಹಾಗೂ ಚಿತ್ತವನ್ನು ನಿರಾಕರಿಸುವವರು ಮತ್ತು ನಂಬಿಕೆ ಹಾಗೂ ಪರಿಶುದ್ಧತೆಯನ್ನು ಕೆಡಿಸುವವರಿಗೆ ಯಾವ ನಿರೀಕ್ಷೆಯಿದೆ? **19**

**4:19** *"ಒಪ್ಪಿಸಲಿ"*– 5:7; ಕೀರ್ತನೆ 31:5; 37:5; ಅಪೊ 20:32.

*"ಒಳ್ಳೇದನ್ನು ಮಾಡುವದು"*– 2:12,15; 3:11; ರೋಮಾ 2:7; 2 ಕೊರಿಂಥ 5:10; 9:8; ಗಲಾ 6:9-10; ಎಫೆ 2:10; ಕೊಲೊ 1:10; 2 ತಿಮೊ 3:17; ತೀತ 2:14. ಕಷ್ಟಗಳು, ಅವಮಾನಗಳು, ಹಿಂಸೆಗಳು ಅಥವಾ ದೇವರ ಕ್ರಮಶಿಕ್ಷಣಗಳು ನಾವು ಇತರರಿಗೆ ಒಳ್ಳೇದನ್ನು ಮಾಡದಂತೆ ನಮ್ಮನ್ನು ತಡೆಯಲು ಎಂದಿಗೂ ಅವಕಾಶ ಕೊಡಬಾರದು.

# 51

**5:1** *"ಹಿರಿಯರು"*– ಅಪೊ 14:23; 15:2; 20:17; 1 ತಿಮೊ 4:14; 5:17; ತೀತ 1:5.

*"ಕಣ್ಣಾರೆ ಕಂಡವನು"*– ಯೇಸು ಕ್ರಿಸ್ತನ ಮೂಲ ಅಪೊಸ್ತಲರಲ್ಲಿ ಪೇತ್ರನೂ ಒಬ್ಬನಾಗಿದ್ದಾನೆ.

*"ಪ್ರತ್ಯಕ್ಷವಾಗುವ ಪ್ರಭಾವ"*– ರೋಮಾ 8:17-18. **2-4**

**5:2-4** ಇಲ್ಲಿ ನಾವು ಹಿರಿಯರು (ಗ್ರೀಕ್ "ಪ್ರೆಸ್ಬುಟರಸ್") ಸಭಾಧ್ಯಕ್ಷರ (1 ತಿಮೊ 3:1 ಗ್ರೀಕ್ ನಲ್ಲಿ "ಎಪಿಸ್ಕೊಪೊಸ್") ಕಾರ್ಯ ಮಾಡಬೇಕು ಎಂಬದಾಗಿ ಹೇಳಲಾಗಿರುವದನ್ನು ನೋಡುತ್ತೇವೆ – ಪೇತ್ರನು ಎರಡೂ ಪದಗಳ ಅರ್ಥ ಒಂದೇ ಎಂಬದಾಗಿ ಹೇಳುವದನ್ನು ನಾವು ನೋಡುತ್ತೇವೆ. ಹಿರಿಯರು ಅಥವಾ ಸಭಾಧ್ಯಕ್ಷರಿಗೆ ಇರಬೇಕಾದ ಅರ್ಹತೆಗಳ ಬಗ್ಗೆ ತಿಳಿಯಲು 1 ತಿಮೊ 3:1-7 ಮತ್ತು ತೀತ 1:5-9 ನೋಡಿರಿ. ಯೇಸು ಕ್ರಿಸ್ತನು ಹಿರೀಕುರುಬನಾಗಿದ್ದು ಸ್ಥಳೀಯ ಸಭೆಗಳನ್ನು ನೋಡಿಕೊಳ್ಳುವ ಜವಾಬ್ದಾರಿಕೆಯನ್ನು ಆತನು ಹಿರಿಯರಿಗೆ ಒಪ್ಪಿಸಿದ್ದಾನೆ – ಅಪೊ 20:28. ಯೇಸು ಕ್ರಿಸ್ತನು ತನ್ನ ಜನರನ್ನು ಅವರ ಪೋಷಣೆಗೆ ಒಪ್ಪಿಸಿದ್ದಾನೆ ಮತ್ತು ಅವರು ತಾವು ಮಾಡುವ ಕಾರ್ಯಗಳ ವಿಷಯದಲ್ಲಿ ಆತನಿಗೆ ಉತ್ತರವನ್ನು ಕೊಡಬೇಕು. ಅವರು ಯಾವ ರೀತಿಯ ಕುರುಬರಾಗಿರಬೇಕೆಂದು ಆತನು ಬಯಸುತ್ತಾನೆಯೋ ಹಾಗಿರುವ ಸಲುವಾಗಿ ಅವರೆಲ್ಲರೂ ತಮ್ಮ ಜವಾಬ್ದಾರಿಕೆಗಳನ್ನು ಎಚ್ಚರಿಕೆಯಿಂದ ನಿಭಾಯಿಸಬೇಕು. 2:21; ಯೆಶಾಯ 56:10-11; ಯೆರೆ 3:15; 10:21; 12:10; 23:1-4; ಯೆಹೆಜ್ಕೇಲ 34:2-10 ರೊಂದಿಗೆ ಹೋಲಿಸಿ ನೋಡಿರಿ. **2**

**5:2** *"ನೀಚವಾದ ದ್ರವ್ಯಾಶೆ"*– ಮತ್ತಾಯ 6:24; 1 ತಿಮೊ 6:8-10; ತೀತ 1:7.

*"ಸಿದ್ಧಮನಸ್ಸು"*– ತೀತ 2:14. **3**

**5:3** *"ದೊರೆತನ ಮಾಡುವವರಂತೆ ನಡೆಯದೆ"*– ಮತ್ತಾಯ 20:25-28.

*"ಮಾದರಿಗಳಾಗಿ"*– 1 ಕೊರಿಂಥ 11:1; ಫಿಲಿಪ್ಪಿ 3:17; 2 ಥೆಸ 3:7; 1 ತಿಮೊ 4:12; ತೀತ 2:7. **4**

**5:4** *"ಪ್ರತ್ಯಕ್ಷನಾಗುವಾಗ"*– ಮತ್ತಾಯ 24:30; ತೀತ 2:13; ಇಬ್ರಿ 9:28; ಪ್ರಕ 22:12.

*"ಜಯಮಾಲೆ"*– ಫಿಲಿಪ್ಪಿ 4:1; 1 ಥೆಸ 2:19; 2 ತಿಮೊ 2:5; 4:8; ಯಾಕೋಬ 1:12.

ನಂಬಿಗಸ್ತರಾದ ಹಿರಿಯರಿಗೆ ಮಹಿಮಾರ್ಥವಾದ ಜಯಮಾಲೆಗಳು ಸಿಗುತ್ತವೆ.

*"ಬಾಡಿಹೋಗುವದಿಲ್ಲ"*– 1 ಕೊರಿಂಥ 9:25. **5**

**5:5** *"ಅಧೀನರಾಗಿರಿ"*– 2:13,18; 3:1; 1 ಕೊರಿಂಥ 16:16; ಎಫೆ 5:21; ಯಾಕೋಬ 3:17; 4:7.

*"ದೀನಮನಸ್ಸು"*– ಜ್ಞಾನೋ 11:2; 15:33; ಜೆಫ 2:3; ಫಿಲಿಪ್ಪಿ 2:3; ಕೊಲೊ 3:12; ತೀತ 3:2; ಯಾಕೋಬ 3:13; ಮತ್ತಾಯ 5:13; 11:29. ದೀನಮನಸ್ಸಿನ ಒಂದು ಲಕ್ಷಣ ಏನೆಂದರೆ ನಮ್ಮ ಕುರಿತು ನಾವು ಹೆಚ್ಚಳಪಡದೆ ಇರುವದು ಮತ್ತು ಇತರರು ನಮ್ಮನ್ನು ಹೊಗಳದೆ ಇರಲಿ ಎಂದು ಬಯಸುವಂಥದ್ದು. ಇವುಗಳಲ್ಲಿ ಎರಡನೆಯದಕ್ಕಿಂತ ಮೊದಲನೆಯದು ಸುಲಭವಾದ ಕಾರ್ಯವಾಗಿದೆ.

*"ಅಹಂಕಾರ"*– ಯಾಕೋಬ 4:6. ದೇವರು ನಮ್ಮನ್ನು ಎದುರಿಸಬೇಕೆಂದು ನಾವು ಬಯಸುತ್ತೇವೆಯೋ? ಅದಕ್ಕೆ ಮಾರ್ಗ ಇಲ್ಲಿದೆ. ದೇವರು ದೀನಮನಸ್ಸುಳ್ಳವರಿಗೆ ಕೊಡುವ ದೊರಕದಂತೆ ಅಹಂಕಾರವು ನಮ್ಮನ್ನು ತಡೆಯುತ್ತದೆ. ಕ್ರೈಸ್ತೀಯ ಜೀವಿತದಲ್ಲಿ ಎದುರಾಗುವ ಬಹುತೇಕ ಸೋಲುಗಳು ಮತ್ತು ವಿಫಲತೆಗಳಿಗೆ ಇದುವೇ ಮೂಲ ಕಾರಣವಾಗಿದೆ. **6**

**- 5:6** ಯಾಕೋಬ 4:10.

*"ತಕ್ಕ ಕಾಲದಲ್ಲಿ"*– ಆತನು ಇನ್ನೂ ಯೌವನಸ್ಥರಿಗೆ ಮಾತನಾಡುತ್ತಾ ಇದ್ದಾನೆ (ವ 5). ತಕ್ಕ ಕಾಲ ಎಂಬದು ಅವರು ಅಂದುಕೊಳ್ಳುವ ತಕ್ಕ ಕಾಲವಲ್ಲ, ಬದಲಾಗಿ ದೇವರು ಅಂದುಕೊಳ್ಳುವ ಕಾಲವಾಗಿದೆ. ಯೌವನಸ್ಥರು ವಿಶ್ರಾಂತಿಯಿಲ್ಲದವರು ಮತ್ತು ತಾವು ಜ್ಞಾನಿಗಳು ಎಂಬದಾಗಿ ನೆನೆಸಬಾರದು ಬದಲಾಗಿ ಸಣ್ಣ ವಿಷಯಗಳಲ್ಲಿ ತಮ್ಮನ್ನು ನೀತಿವಂತರೆಂದು ಸಾಬೀತುಪಡಿಸಿಕೊಳ್ಳಬೇಕು (ಲೂಕ 16:10) ಮತ್ತು ದೇವರು ತನ್ನ ಮಾರ್ಗ ಹಾಗೂ ಸಮಯದಲ್ಲಿ ಅವರನ್ನು ಯಾವ ಸ್ಥಾನದಲ್ಲಿಡುವ ಆಯ್ಕೆ ಮಾಡುತ್ತಾನೋ ಅದಕ್ಕಾಗಿ ಕಾಯುವವರಾಗಿರಬೇಕು (ಕೀರ್ತನೆ 78:6-7; 31:15). **7**

**- 5:7** ಕೀರ್ತನೆ 55:22; ಮತ್ತಾಯ 6:33-34; ಫಿಲಿಪ್ಪಿ 4:6-7.

*"ಆತನು ನಿಮಗಾಗಿ ಚಿಂತಿಸುತ್ತಾನೆ"*– ಮತ್ತಾಯ 6:30; ಇಬ್ರಿ 2:6-8; ಫಿಲಿಪ್ಪಿ 4:19. ದೇವರು ನಮ್ಮ ಬಗ್ಗೆ ಚಿಂತಿಸುತ್ತಾನೆ, ನಮಗಾಗಿ ಯೋಚಿಸುತ್ತಾನೆ ಮತ್ತು ತಂದೆ ತನ್ನ ಮಕ್ಕಳ ವಿಷಯದಲ್ಲಿ ಕಾಳಜಿಯುಳ್ಳವನಾಗಿರುವ ಹಾಗೆ ಕಾಳಜಿಯುಳ್ಳವನಾಗಿರುತ್ತಾನೆ. ಚಿಂತೆ ಮಾಡುವದೆಂದರೆ ನಮ್ಮನ್ನು ಅಸಹಾಯಕರನ್ನಾಗಿ ಮಾಡಿಕೊಳ್ಳುವದು ಮತ್ತು ಆತನಿಗೆ ಅಗೌರವ ತರುವದಾಗಿದೆ. ನಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕುವದೆಂದರೆ ಅವುಗಳನ್ನು ಆತನ ಬಳಿಗೆ ತರುವದು ಮತ್ತು ಅವುಗಳನ್ನು ಆತನು ತೆಗೆದುಕೊಳ್ಳುವನು ಹಾಗೂ ನಮ್ಮ ಹಿತಕ್ಕಾಗಿ ಅವುಗಳನ್ನು ಆತನು ಮಾರ್ಪಡಿಸುತ್ತಾನೆ ಎಂಬದಾಗಿ ಭರವಸೆಯಿಡುವದು, ಆತನ ಒಳ್ಳೇತನ, ಜ್ಞಾನ ಮತ್ತು ಶಕ್ತಿಯನ್ನು ಆತುಕೊಳ್ಳುವದು ಆಗಿದೆ. **8**

**5:8** *"ಸ್ವಸ್ಥಚಿತ್ತರಾಗಿರಿ"*– ಗ್ರೀಕ್ ಪದದ ಅಕ್ಷರಾರ್ಥ "ಸ್ವಸ್ಥಚಿತ್ತರಾಗಿರುವದು" ಆದರೆ ಆಲಂಕಾರಿಕವಾಗಿ "ಶಮೆದಮೆಯುಳ್ಳವರಾಗಿರುವದು" ಅಥವಾ "ಸ್ವಸ್ಥ ಮನಸ್ಸುಳ್ಳವರಾಗಿರುವದು" ಅಥವಾ "ಎಚ್ಚರಿಕೆಯುಳ್ಳವರಾಗಿರುವದು" – ನಿಜವಾದ ಕ್ರೈಸ್ತೀಯ ಜೀವನಕ್ಕೆ ಪರಿಚಯವಿಲ್ಲದ ಯಾವುದೇ ಕಾರ್ಯಗಳ ನಿಯಂತ್ರಣದಲ್ಲಿ ಇಲ್ಲದೆ ಇರುವದು. 1:13; 4:7; ಜ್ಞಾನೋ 25:28; ಗಲಾ 5:23; 1 ಥೆಸ 5:6,8; 2 ಪೇತ್ರ 1:6.

*"ಎಚ್ಚರವಾಗಿರಿ"*– ಎಫೆ 6:18; 1 ಥೆಸ 5:6. ಸೈತಾನನು ಆತ್ಮೀಕವಾಗಿ ಸೋಮಾರಿಗಳಾಗಿರುವವರು ಅಥವಾ ನಿದ್ರಾವಸ್ಥೆಯಲ್ಲಿರುವವರನ್ನು ಸುಲಭವಾಗಿ ಹಿಡಿದುಕೊಳ್ಳುತ್ತಾನೆ. ಮತ್ತಾಯ 4:1 ರಲ್ಲಿ ಸೈತಾನನ ಕುರಿತಾದ ನೋಟ್ ನೋಡಿರಿ. ಅವನು "ತಿರುಗಾಡಬೇಕು" ಯಾಕಂದರೆ (ದೇವರ ಹಾಗೆ) ಒಂದೇ ಸಮಯದಲ್ಲಿ ಎಲ್ಲಾ ಸ್ಥಳಗಳಲ್ಲಿಯೂ ಇರಲು ಅವನಿಗೆ ಆಗುವದಿಲ್ಲ. ಅವನು ಸಿಂಹದ ಹಾಗೆ ಬರುತ್ತಾನಾದರೂ, ನಂಬಿಗಸ್ತರಾದ ವಿಶ್ವಾಸಿಗಳನ್ನು ಎದುರಿಸಲು ಬೇಕಾದ ಧೈರ್ಯ ಅವನಿಗೆ ಇಲ್ಲ (ಯಾಕೋಬ 4:7), ಅವರು ಅವನನ್ನು ತುಳಿದು ಹಾಕುವರು (ಕೀರ್ತನೆ 91:13). **9**

**5:9** *"ಅವನನ್ನು ಎದುರಿಸಿರಿ"*– ಎಫೆ 6:10-18. ವಿಶ್ವಾಸಿಗಳು ಸೈತಾನನ ಯಾವ ಶೋಧನೆಗಳಿಗೂ ಅಥವಾ ತಂತ್ರಗಳಿಗೂ ಒಳಗಾಗಬಾರದು, ಅವರು ಅವನನ್ನು ಕರ್ತನಾದ ಯೇಸು ಕ್ರಿಸ್ತನಲ್ಲಿ ದೃಢವಾದ ಭರವಸೆಯುಳ್ಳವರಾಗಿ ಎದುರಿಸಬೇಕು (1 ಯೋಹಾನ 4:4; 1 ಕೊರಿಂಥ 10:13).

*"ಅಂಥ ಬಾಧೆಗಳು"*– ನಮಗೆ ಶೋಧನೆಗಳು ಮತ್ತು ವಿಚಾರಣೆಗಳು ಎದುರಾಗುವಾಗ ನಮಗೆ ಮಾತ್ರವೇ ಇಂಥ ಬಾಧೆಗಳು ಎದುರಾಗುತ್ತವೆ ಎಂದು ನಾವು ಯೋಚಿಸುತ್ತೇವೆ. ಆದರೆ ಅದು ಹಾಗಲ್ಲ. ವಿಶ್ವಾಸಿಗಳೆಲ್ಲರಿಗೂ ಇಂಥ ಬಾಧೆಗಳೇ ಎದುರಾಗುತ್ತವೆ. **10**

**5:10** *"ಕೃಪೆ"*– ಯೋಹಾನ 1:14,16,17; ಅಪೊ 15:11; 20:24,32; ರೋಮಾ 1:7; 3:24; 5:21; 2 ಕೊರಿಂಥ 8:9; 9:8; ಎಫೆ 2:8-10.

*"ಕರೆದಿರುವ"*– 2:9; 3:9; ರೋಮಾ 1:6-7; 8:28-30; 11:29; ಎಫೆ 4:1; ಇಬ್ರಿ 3:1; 2 ಪೇತ್ರ 1:10.

*"ಪ್ರಭಾವ"*– ಯೋಹಾನ 17:24; ರೋಮಾ 5:2; 8:17.

*"ಕ್ರಿಸ್ತನಲ್ಲಿ"*– ರೋಮಾ 6:3-8; ಎಫೆ 1:1,3 ರ ನೋಟ್ಸ್ ನೋಡಿರಿ.

*"ನೀವು ಬಾಧೆಪಟ್ಟ ಮೇಲೆ"*– 1:6; 4:1,12. ಶ್ರಮೆಗಳು, ನಂತರ ಪ್ರಭಾವವು ಯೇಸು ಕ್ರಿಸ್ತನ ಮಾರ್ಗವಾಗಿದೆ (1:11) ಮತ್ತು ದೇವರು ವಿಶ್ವಾಸಿಗಳಿಗೆ ಈ ಮಾರ್ಗವನ್ನು ಏರ್ಪಡಿಸಿದ್ದಾನೆ. ಕಷ್ಟಗಳು ಹಾಗೂ ಶ್ರಮೆಗಳನ್ನು ಅನುಭವಿಸುತ್ತಿರುವವರು ಏನು ಮಾಡುವದಾಗಿ ದೇವರು ಹೇಳಿದ್ದಾನೆ ಎಂಬದನ್ನು ಗಮನಿಸಿರಿ. ಕೀರ್ತನೆ 66:12 ರೊಂದಿಗೆ ಹೋಲಿಸಿ ನೋಡಿರಿ. ಆತನು ನಮ್ಮನ್ನು ಅವೆಲ್ಲವುಗಳಿಂದ ಸುರಕ್ಷಿತವಾಗಿ ಕರೆತರುವ ಮತ್ತು

ಹಿಂದೆಗಿಂತಲೂ ಹೆಚ್ಚು ಬಲಿಷ್ಠರನ್ನಾಗಿ ಮಾಡುವ ವಾಗ್ದಾನವನ್ನು ಮಾಡಿದ್ದಾನೆ. **12**

**5:12** *"ಸಿಲ್ವಾನನ ಕೈಯಲ್ಲಿ"*– ರೋಮಾ 16:22; 1 ಕೊರಿಂಥ 1:1; 2 ಕೊರಿಂಥ 1:1; ಫಿಲಿಪ್ಪಿ 1:1; ಕೊಲೊ 1:1 ರೊಂದಿಗೆ ಹೋಲಿಸಿ ನೋಡಿರಿ. ಸಿಲ್ವಾನ ಮತ್ತು ಸೀಲ ಇಬ್ಬರೂ ಒಬ್ಬರೇ ಆಗಿದ್ದಾರೆ – ಅಪೊ 15:22; 2 ಕೊರಿಂಥ 1:19.

*"ನಿಜವಾದ ಕೃಪೆ"*– ಈ ಪತ್ರಿಕೆಯಾದ್ಯಂತ ದೇವರ ಕೃಪೆ ಪ್ರಮುಖವಾದ ಧ್ಯೇಯಗಳಲ್ಲಿ ಒಂದಾಗಿದೆ – 1:2,10,13; 4:10; 5:5,10. ರಕ್ಷಣೆಯು ದೇವರ ಕೃಪೆಯಿಂದ ಮಾತ್ರವೇ ದೊರೆಯುತ್ತದೆ ಮತ್ತು ಅದೇ ಕೃಪೆ ದೇವರಿಂದ ರಕ್ಷಣೆ ಹೊಂದಿರುವ ಜನರನ್ನು ಸುರಕ್ಷಿತವಾಗಿ ಕಡೆಯಲ್ಲಿ ಪ್ರಭಾವಕ್ಕೆ ನಡೆಸುತ್ತದೆ. **13**

**5:13** *"ಸಭೆಯು ನಿಮಗೆ"*– "ಸಭೆಯು ನಿಮಗೆ" ಎಂಬ ಪದ ಸೇರಿಸಿರುವದನ್ನು ಗಮನಿಸಿರಿ. ಇದನ್ನು "ಆಕೆ" –ಎಂಬದಾಗಿ ಭಾಷಾಂತರ ಮಾಡಬಹುದು, ಅದರ ಅರ್ಥ ಬಾಬೆಲಿನಲ್ಲಿರುವ ಸ್ಥಳೀಯ ಸಭೆ ಅಥವಾ ಪೇತ್ರನ ಹೆಂಡತಿ ಆಗಿರಬಹುದು.

*"ಬಾಬೆಲ್"*– ಆದಿ 10:10; 2 ಅರಸು 17:24; ಯೆಶಾಯ 13:1; ಯೆರೆ 50—52 ಅಧ್ಯಾಯಗಳು. ಆ ಕಾಲದಲ್ಲಿ ಬಾಬೆಲ್ ಎಂಬದಾಗಿ ಕರೆಯಲ್ಪಡುವ ಸೇನಾ ಶಿಬಿರವೊಂದು ಇತ್ತು. ಅನೇಕ ವ್ಯಾಖ್ಯಾನಕಾರರು ಪೇತ್ರನು ರೋಮಾಪುರದ ಬಗ್ಗೆ ಮಾತನಾಡುತ್ತಾ ಇದ್ದಾನೆ ಎಂಬ ಅಭಿಪ್ರಾಯವುಳ್ಳವರಾಗಿದ್ದಾರೆ (ಪ್ರಕ 17:5,18 ರೊಂದಿಗೆ ಹೋಲಿಸಿ ನೋಡಿರಿ). ಅವನು ತನ್ನ ಮೊದಲನೆಯ ಪತ್ರಿಕೆಯನ್ನು ಅಲ್ಲಿಂದಲೇ ಬರೆದನು ಎಂಬ ನಂಬಿಕೆಯಿದೆ, ಆದರೆ ಅದಕ್ಕೆ ಯಾವುದೇ ಪುರಾವೆಯಿಲ್ಲ. ಒಂದುವೇಳೆ ಅವನು ರೋಮಾಪುರದಿಂದಲೇ ಬರೆದಿದ್ದರೆ, ಅದನ್ನು ನೇರವಾಗಿ ಯಾಕೆ ಹೇಳಿಕೊಂಡಿಲ್ಲ ಎಂಬ ಪ್ರಶ್ನೆಯು ಎದುರಾಗುತ್ತದೆ?

*"ಮಾರ್ಕ"*– ಅಪೊ 12:12,25; ಕೊಲೊ 4:10; 2 ತಿಮೊ 4:11. ಪೇತ್ರ ಮಾರ್ಕನನ್ನು ತನ್ನ ಆತ್ಮೀಕ ಮಗನೆಂದು ನೆನೆಸುತ್ತಾ ಇದ್ದನು. 1 ತಿಮೊ 1:2 ರೊಂದಿಗೆ ಹೋಲಿಸಿ ನೋಡಿರಿ. **14**

**5:14** *"ಮುದ್ದಿಟ್ಟು"*– ರೋಮಾ 16:16; 1 ಕೊರಿಂಥ 16:20.

*"ಪ್ರೀತಿ"*– ದೈವೀಕ ಪ್ರೀತಿ – ಅಗಾಪೆ – 1 ಕೊರಿಂಥ 13:1 ರ ನೋಟ್ ನೋಡಿರಿ.

*"ಸಮಾಧಾನ"*– ಲೂಕ 1:79; 2:14; ಯೋಹಾನ 14:27; ರೋಮಾ 1:7. "ಯೇಸು ಕ್ರಿಸ್ತನಲ್ಲಿ" ಇಲ್ಲದೆ ಇರುವವರಿಗೆ ನಿಜವಾದ ಸಮಾಧಾನ ದೊರೆಯಲು ಸಾಧ್ಯವೇ ಇಲ್ಲ.